ಸಂಪುಟ : 9 ಸಂಚಿಕೆ 11 ಪುಟ : 4 ಬೆಲೆ : 3.00 ಬುಧವಾರ ಫೆಬ್ರವರಿ 7, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 11 Pages : 4 Price : 3.00 Wednesday February 7, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 7ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 32ರಲ್ಲಿ ದಾಸರ ಓಣಿ, ಭಜಂತ್ರಿ ಓಣಿ ,ಸಿಕ್ಕಲಗಾರ ಓಣಿ, ಏಳು ಮಕ್ಕಳ ಗುಡಿ ಲೈನ್ ಹಳೆ ಕಚೇರಿ ರಸ್ತೆ, ಲಕ್ಷ್ಮೀ ಗುಡಿ ಲೈನ್ , ಝುಂಡಾಕಟ್ಟಿ, ತ್ರಿಕೋಟೇಶ್ವರ ರಸ್ತೆ, ಸುಣಗಾರ ಓಣಿ ಲೈನ್, ರಂಗನವಾಡ, ಒಂದನೇ ನಂಬರ್ ಶಾಲೆ, ಗುಜ್ಜರ ಬಸ್ತಿ ಲೈನ್, ಕೋಳಿಕೇರಿ ಮೂಲಿ ಲೈನ್ ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 28ರಲ್ಲಿ ದೇವಗಿರಿ ಮಾಸ್ತರ್ ಲೈನ್, ಅಬ್ಬಿಗೇರಿ ಅವರ ಲೈನ್, ಕೃಷ್ಣ ಟ್ಯೂಷನ್ ಲೈನ್, ಸೋಲಾಪಟ್ಟಿ ಅವರ ಲೈನ್, ವಾರ್ಡ್ ನಂ. 2, 23, 20 ರಲ್ಲಿ ಜಂತ್ಲಿ ಅವರ ಲೈನ್, ಕುಂಬಾರ ಲೈನ್, ದ್ಯಾಮನಕಟ್ಟಿ ಲೈನ್, ಗಂಜಿಬಸವೇಶ್ವರ ಸರ್ಕಲ್, ಪಡಗದವರ ಲೈನ್, ಹನುಮಾನ ಗರಡಿ ಲೈನ್, 3ನೇ ನಂಬರ್ ಶಾಲೆ, ದ್ರೌಪದಿ ಬಾಯಿ ಲೈನ್.

ವಾರ್ಡ್ ನಂ. 29ರಲ್ಲಿ ರಾಜೀವ್ ಗಾಂಧಿ ನಗರ, ಮೀನದ್ ಮಾರ್ಕೆಟ್, ಡಿಸಿ ಮಿಲ್ ರಸ್ತೆ, ಗಣೇಶ ಗುಡಿ, ಬಸವೇಶ್ವರ ಗುಡಿ ಲೈನ್, ಮಹೇಂದ್ರಕರ್ ಸರ್ಕಲ್ ರಸ್ತೆ, ಗಾಂಧಿ ಸರ್ಕಲ್ ರಸ್ತೆ, ಅಂಗನವಾಡಿ ಲೈನ್, ಶುದ್ಧ ಕುಡಿಯುವ ನೀರಿನ ಘಟಕದ ಸುತ್ತಮುತ್ತಲಿನ ಲೈನ್, ಉಳಿದ ಕೆಲವು ಭಾಗಗಳು,

ವಾರ್ಡ್ ನಂ. 35ರಲ್ಲಿ ರಾಮನಗರ, ಬಾಪೂಜಿನಗರ ವಾರ್ಡ್ ನಂ. 8, 9, 10 ರಲ್ಲಿ ಹೆಲ್ತ್ ಕ್ಯಾಂಪ್ ಕಬಾಡಿ ರಸ್ತೆ, ಮಜ್ಜಿಗೆಯವರ್ ಲೈನ್, ತೆಗ್ಗಿನ್ ಪ್ಲಾಟ್ ಓಣಿ , ಮಲ್ಲಯ್ಯಕಟ್ಟಿ, ಕುರಹಟ್ಟಿ ಪೇಟೆ, ಗದಗಿನ ಅವರ ಮನೆಯ ಸಂಧಿ, ಬೋರೇಗಾರ್ ಓಣಿ, ನೀಲಕಂಠ ಮಠ ಹಿಂದಿನ ಭಾಗ,

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 'ಸರ್ ಸಿ.ವಿ ರಾಮನ್ ಅತ್ಯುತ್ತಮ ಶಿಕ್ಷಕ' ಪ್ರಶಸ್ತಿಗೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಮಾದರಿ ಪ್ರೌಢಶಾಲಾ ವಿಜ್ಞಾನ ಶಿಕ್ಷಕರನ್ನು ಗುರುತಿಸಲು ಶಿಕ್ಷಣ ಇಲಾಖೆ ಗದಗ ಮತ್ತು ನಮನ ಚಾರಿಟಬಲ್ ಟ್ರಸ್ಟ್‌ನೊಂದಿಗೆ ಕೈಜೋಡಿಸಿದೆ.

ಒಟ್ಟು 10 ಪ್ರಶಸ್ತಿಗಳನ್ನು ನೀಡಲು ಯೋಜಿಸಲಾಗಿದೆ. 2 ಶಿಕ್ಷಕರಿಗೆ ತಲಾ 10 ಸಾವಿರ ರೂ. ನಗದು ಪುರಸ್ಕಾರ (ಸರ್ಕಾರಿಯಿಂದ ಒಬ್ಬರು ಮತ್ತು ಖಾಸಗಿ ಶಾಲೆಯಿಂದ ಒಬ್ಬರು) ಮತ್ತು 8 ಶಿಕ್ಷಕರಿಗೆ ಶ್ಲಾಘನಾ ಪತ್ರ ನೀಡಿ ಗೌರವಿಸಲಾಗುವುದು.

ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಸಕ್ತ ವಿಜ್ಞಾನ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯನ್ನು www.namanatrust.org ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಯನ್ನು #MIG-I-103, ಹುಡ್ಕೊ ಕಾಲೋನಿ, ಗದಗ, ಅಥವಾ ಇಮೇಲ್ namanatrust-gadag@gmail.com ಮೂಲಕ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ ಫೆ. 15 ಆಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

## ಉಚಿತ ಸೈಕಲ್ ಯೋಜನೆಗೆ ಪ್ರಸ್ತಾವನೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ಯೋಜನೆಯನ್ನು ಸರ್ಕಾರ ಮರು ಪರಿಚಯಿಸುವ ಸಾಧ್ಯತೆ ಇದೆ. ಈ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಮುಖ್ಯಮಂತ್ರಿಯವರಿಗೆ ಪ್ರಸ್ತಾವನೆ ಸಲ್ಲಿಸಿದೆ ಎನ್ನಲಾಗಿದೆ.

### ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವೈಶಾಲಿ ಎಂ.ಎಲ್ ನೇತೃತ್ವದಲ್ಲಿ ಪ್ರಗತಿ ಪರಿಶೀಲನಾ ಸಭೆ

# ಅರ್ಜಿಗಳನ್ನು ಪ್ರಥಮಾದ್ಯತೆ ಮೇರೆಗೆ ಅಂತ್ಯಗೊಳಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಮುಂಡರಗಿ ತಾಲೂಕಿನಲ್ಲಿನ ಜನತಾ ದರ್ಶನದಲ್ಲಿ ಸ್ವೀಕೃತವಾಗಿರುವ ವಿವಿಧ ಇಲಾಖೆಗಳ ಅರ್ಜಿಗಳನ್ನು ಪರಿಶೀಲಿಸಿ ಪ್ರಥಮಾದ್ಯತೆ ಮೇಲೆ ತಾರ್ಕಿಕವಾಗಿ (logical end) ಅಂತ್ಯಗೊಳಿಸಲು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸ್ವೀಕೃತ ಅರ್ಜಿಗಳಿಗೆ ಸೂಕ್ತ ಹಿಂಬರಹ ಕೊಡಬೇಕು. ಬಾಕಿ ಉಳಿದ ಅರ್ಜಿಗಳ ಕುರಿತು ಹೆಚ್ಚಿನ ನಿಗಾವಹಿಸಿ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು. ಅಂಗವಿಕಲರಿಗೆ ಸಾಧನ–ಸಲಕರಣೆಗಳ ವಿತರಣೆ, ಆರೋಗ್ಯ ಮತ್ತು ಚಿಕಿತ್ಸೆ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ರಸ್ತೆ ಸಂಪರ್ಕ, ಶೌಚಾಲಯ ವ್ಯವಸ್ಥೆ ಕುರಿತಂತೆ ಮೂಲಭೂತ ಸೌಲಭ್ಯ, ಮಾಸಾಶನಕ್ಕೆ ಸಂಬಂಧಿಸಿದಂತೆ ಜನತಾ ದರ್ಶನದಲ್ಲಿ ಸ್ವೀಕೃತ ವಿವಿಧ ಅರ್ಜಿಗಳು ಸೂಕ್ತ ವಿಲೇವಾರಿಯಾಗುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳು ಶಿಸ್ತುಬದ್ಧವಾಗಿ ಕಾರ್ಯನಿರ್ವಹಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.



**ಸಕಾಲ ಪ್ರಗತಿ ಪರಿಶೀಲನೆ**

ಸಕಾಲ ಯೋಜನೆಯ ಅನುಷ್ಠಾನದಲ್ಲಿ ಜಿಲ್ಲೆ ಉತ್ತಮ ಪ್ರಗತಿ ಸಾಧಿಸಲು ಎಲ್ಲ ಅಧಿಕಾರಿಗಳು ನಿಗದಿತ ಅವಧಿಯಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ತಿಳಿಸಿದರು. ಸಕಾಲದಲ್ಲಿ ಅರ್ಜಿ ಸ್ವೀಕರಿಸುವಾಗ ಅರ್ಜಿಯ ಜೊತೆಗೆ ನಿಗದಿಪಡಿಸಿದ ದಾಖಲಾತಿಗಳ ಸಮೇತ ಸ್ವೀಕರಿಸಬೇಕು. ಸಕಾಲ ಯೋಜನೆಯಡಿ ಸ್ವೀಕರಿಸಿದ ಅರ್ಜಿಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು.

ಸರ್ಕಾರದಿಂದ ಅನುಷ್ಠಾನಗೊಂಡ ಐದು ಗ್ಯಾರಂಟಿ ಯೋಜನೆಗಳಾದ ಶಕ್ತಿ, ಗೃಹಜ್ಯೋತಿ, ಯುವ ನಿಧಿ, ಅನ್ನಭಾಗ್ಯ, ಗೃಹಲಕ್ಷ್ಮೀ ಯೋಜನೆಗಳ ಫಲಾನುಭವಿಗಳಿಗೆ ಸೌಲಭ್ಯ ಒದಗಿಸುವಲ್ಲಿ ನಿರ್ಲಕ್ಷ್ಯ ತೋರಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಮುಂಬರುವ ಲೋಕಸಭೆ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಎಲ್ಲ ಫಲಾನುಭವಿಗಳ ಆಯ್ಕೆ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ ಆರ್ಥಿಕ ಮತ್ತು ಭೌತಿಕ ಪ್ರಗತಿ ಸಾಧನೆಗೆ ಕ್ರಮ ವಹಿಸಬೇಕೆಂದು ಸೂಚಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ನಿರ್ಮಲಾ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಉದ್ದೇಶಿತ ಜಿಲ್ಲಾ, ರಾಜ್ಯ, ಕೇಂದ್ರದ 2022–23ನೇ ಸಾಲಿನ ಅನುದಾನದ ವಿವರ ಮಾಹಿತಿಯನ್ನು ಎಲ್ಲ ಇಲಾಖೆಯ ಅಧಿಕಾರಿಗಳು ಸಂಬಂಧಿತ ನೋಡಲ್ ಅಧಿಕಾರಿ, ಮಹಿಳಾ ಇಲಾಖೆಯ ಅಧಿಕಾರಿಗಳಾದ ಡಾ. ಕಮಲಾ ಬೈಲೂರ ಅವರಿಗೆ ಸಲ್ಲಿಸಬೇಕೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಹೆಸ್ಕಾಂ, ಕೃಷಿ, ಶಿಕ್ಷಣ, ಸಾರಿಗೆ, ಆರೋಗ್ಯ, ಹಿಂದುಳಿದ ವರ್ಗ, ಆಯುಷ್, ತೋಟಗಾರಿಕೆ, ಆಹಾರ, ಅಲ್ಪಸಂಖ್ಯಾತರ ಕಲ್ಯಾಣ ಸೇರಿದಂತೆ ವಿವಿಧ ಇಲಾಖೆಗಳು ಹಾಗೂ ಅಭಿವೃದ್ಧಿ ನಿಗಮ ನಿಯಮಿತಗಳು ಸಾಧಿಸಿದ ಪ್ರಗತಿ ಪರಿಶೀಲನೆ ಜರುಗಿತು. ಐಪಿಜಿಆರ್‌ಎಸ್, ಫ್ಲಾಗ್‌ಶಿಪ್, ಜಿ.ಪಂ. ಲಿಂಕ್ ಡಾಕ್ಯುಮೆಂಟ್ ಯೋಜನೆಗಳ ಕುರಿತಂತೆ ಪ್ರಗತಿ ಪರಿಶೀಲನೆ ನಡೆಸಲಾಯಿತು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪಿ.ವೈ. ಶೆಟ್ಟೆಪ್ಪನವರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಎಸ್. ನೀಲಗುಂದ, ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ. ರಡ್ಡೇರ, ಯುವಜನ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಶರಣು ಗೋಗೇರಿ, ತಾಲೂಕಾ ತಹಸೀಲ್ದಾರರು, ಕಾರ್ಯನಿರ್ವಹಣಾಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ. ಮಾತನಾಡಿ, ಸಕಾಲ ಯೋಜನೆ ಕುರಿತು ಹೆಚ್ಚು ನಿಗಾ ವಹಿಸುವ ಮೂಲಕ ಯೋಜನೆಯನ್ನು ಯಶಸ್ವಿಗೊಳಿಸುವುದರೊಂದಿಗೆ ಸಾರ್ವಜನಿಕರಿಗೆ ಸಕಾಲದಲ್ಲಿ ಸೇವೆ ಒದಗಿಸಬೇಕು. ಸಕಾಲದಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ನಿಗದಿಪಡಿಸಿದ ವೇಳೆಯಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಇಲಾಖೆಯ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ ಹಾಗೂ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ. ಅದಕ್ಕೆ ಅವಕಾಶ ನೀಡದೇ ಅಧಿಕಾರಿಗಳು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುವಂತೆ ತಿಳಿಸಿದರು.

### ರೋಣ ಮತಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ । ಖನಿಜ ನಿಗಮದ ಅಧ್ಯಕ್ಷ, ಶಾಸಕ ಜಿ.ಎಸ್. ಪಾಟೀಲ್

# ನಿರುದ್ಯೋಗ ಸೃಷ್ಟಿ ಮಾಡಿದ್ದೇ ಕೇಂದ್ರದ ಸಾಧನೆ

■ ವಿಜಯಸಾಕ್ಷಿ ಸುದ್ದಿ, ಡಂಬಳ

ಸಮಗ್ರ ರೋಣ ಮತಕ್ಷೇತ್ರದ ಅಭಿವೃದ್ಧಿಗಾಗಿ ಅಧಿಕಾರಾವಧಿಯಲ್ಲಿ ಅನುದಾನ ಒದಗಿಸಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುವದಾಗಿ ಖನಿಜ ನಿಗಮದ ನೂತನ ಅಧ್ಯಕ್ಷ ರೋಣ ಮತಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ ಹೇಳಿದರು.

ಡಂಬಳ ಹೋಬಳಿಯ ಡೋಣಿ ಗ್ರಾಮದ ಸಾರ್ವಜನಿಕರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಡಂಬಳ ಹೋಬಳಿಯಲ್ಲಿ ಸಿಂಗಟಾಲೂರ ಏತ ನೀರಾವರಿ ಯೋಜನೆಯ ಮೂಲಕ ಡಂಬಳ ಕೆರೆ, ಜಂತ್ಲಿಶಿರೂರ, ಪೇಠಾ ಆಲೂರ, ತಾಮ್ರಗುಂಡಿ ಕೆರೆಗಳನ್ನು ತುಂಬಿಸುವ ಮೂಲಕ ರೈತರ ಕಲ್ಯಾಣ ಕಾರ್ಯವನ್ನು ಮಾಡಲಾಗಿದೆ. ಕ್ಷೇತ್ರದಲ್ಲಿ ಶಾಲಾ ಕಟ್ಟಡ, ರಸ್ತೆ ಅಭಿವೃದ್ಧಿ ಸೇರಿದಂತೆ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.



ಈಗಾಗಲೇ ಕದಾಂಪುರ ಮತ್ತು ಡೋಣಿ ಗ್ರಾಮಕ್ಕೆ 3 ಕೋಟಿ ರೂ ಅನುದಾನ ಕಲ್ಪಿಸಲಾಗಿದೆ. ಇದರಿಂದ ಡೋಣಿ, ಡೋಣಿತಾಂಡ, ಕಪ್ಪತ್ತಗುಡ್ಡಕ್ಕೆ ತೆರಳುವದಕ್ಕೆ ಸಹಕಾರಿಯಾಗಲಿದೆ. ರಾಜ್ಯದ ಕಡುಬಡವರ ಹಿತ ಕಾಯುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನೆರವು ನೀಡಲಾಗುತ್ತಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳು ಆರ್ಥಿಕ ಸಂಕಷ್ಟದಿಂದ ಹೊರಬರುವಂತೆ ಮಾಡಿವೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದರ ಮೂಲಕ ಜನಸಾಮಾನ್ಯರ ಹಿತ ಕಾಯುವ ಕೆಲಸವನ್ನು ಸರ್ಕಾರ ಮಾಡುವುದು ನಿಶ್ಚಿತ ಎಂದರು.

ಈ ಸಂದರ್ಭದಲ್ಲಿ ಈರಣ್ಣ ಎಸ್.ಪೂಜಾರ, ಈರಣ್ಣ ಯಳವತ್ತಿ, ಕಾಶಪ್ಪ ಕುರಿ, ಮುತ್ತಪ್ಪ ಕಿಲಾರಿ, ಎಸ್. ಆರ್. ಪಾಟೀಲ, ಮೌನೇಶ ಹೂವಣ್ಣವರ, ಕಾಶಣ್ಣ ಹೊಣ್ಣುರ, ಸೋಮನಾಥ ಹಳ್ಳಿಕೇರಿ, ಈರಣ್ಣ ಓಲಿ, ಹನಮಪ್ಪ ಗೋಡಿ, ಮಳಪ್ಪ ಜೋಂಡಿ, ರಾಚಪ್ಪ ಗಾಳಪ್ಪನವರ, ಯಮನಪ್ಪ ಈಳಗೇರ, ಕಾಶಪ್ಪ ಅಳವುಂಡಿ, ಮೌನೇಶ ಕೊಪ್ಪಳ ಸೇರಿದಂತೆ ಗ್ರಾಮದ ಹಿರಿಯರು ಇದ್ದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ 10 ವರ್ಷದಲ್ಲಿ 120 ಸಾವಿರ ಲಕ್ಷ ಕೋಟಿ ರೂ. ಸಾಲ ಮಾಡುವ ಮೂಲಕ ದೇಶವನ್ನು ಆರ್ಥಿಕ ದುಃಸ್ಥಿತಿಗೆ ತಂದಿದೆ. ಜನಸಾಮಾನ್ಯರ ವಿಶ್ವಾಸ ಗಳಿಸಿದ್ದ ಸರಕಾರಿ ಸಂಸ್ಥೆಗಳನ್ನು ಮಾರಾಟ ಮಾಡಿ ಖಾಸಗಿ ಕಂಪನಿಗಳಿಗೆ ನೀಡಿದ್ದಾರೆ. ಯುವಕರಿಗೆ ಸೂಕ್ತ ಉದ್ಯೋಗ ನೀಡದೆ ನಿರುದ್ಯೋಗ ಸೃಷ್ಟಿ ಮಾಡಿದ್ದೇ ಇವರ ದೊಡ್ಡ ಸಾಧನೆಯಾಗಿದೆ. ಇದನ್ನೆಲ್ಲ ನೋಡುತ್ತಿರುವ ಯುವಕರು, ಕಾರ್ಮಿಕರು, ಕಡು ಬಡವರು, ರೈತರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದಾರೆ.

– ಜಿ.ಎಸ್. ಪಾಟೀಲ.
ಶಾಸಕರು, ರೋಣ.

### ರಾಷ್ಟ್ರೀಯ ಪಲ್ಸ್ ಪೋಲಿಯೋ ಅನುಷ್ಠಾನ ಕುರಿತು ಟಾಸ್ಕ್ ಫೋರ್ಸ್ ಸಮಿತಿ ಸಭೆ

# ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಮಾರ್ಚ್ 3ರಿಂದ 6ರವರೆಗೆ ನಾಲ್ಕು ದಿನಗಳ ಕಾಲ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಜಿಲ್ಲಾದ್ಯಂತ ಜರುಗಲಿದ್ದು, ಐದು ವರ್ಷದೊಳಗಿನ ಯಾವುದೇ ಮಗು ಪೋಲಿಯೋ ಲಸಿಕೆಯಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ವ್ಯವಸ್ಥಿತವಾಗಿ ನಡೆಸಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಮಂಗಳವಾರ ರಾಷ್ಟ್ರೀಯ ಪಲ್ಸ್ ಪೋಲಿಯೋ ಅನುಷ್ಠಾನ ಕುರಿತು ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇತರೆ ಹೈರಿಸ್ಕ್ ಏರಿಯಾಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಯಾವುದೇ ಮಗು ಪೋಲಿಯೋ ಹನಿಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ 3 ಹಂತದಲ್ಲಿ ಕಟ್ಟುನಿಟ್ಟಾಗಿ ನಡೆಸಲು ಮತ್ತು ಹೈರಿಸ್ಕ್ ಪ್ರದೇಶದಲ್ಲಿ ಅತೀ ಜಾಗರೂಕತೆಯಿಂದ ಪಾಲಕರನ್ನು ಮನವೊಲಿಸಿ ಲಸಿಕೆಯನ್ನು ನೀಡಲು ಸೂಚಿಸಿದರು. ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು ಹಾಗೂ ಮೇಲ್ವಿಚಾರಕರು ಕಡ್ಡಾಯವಾಗಿ ಅಂತಹ ಕ್ಷೇತ್ರಗಳಿಗೆ ಭೇಟಿ ಮಾಡಲು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚಿಸಿದರು.



ಡಾ. ಮುಕುಂದ ಗಲಗಲಿ ಮಾತನಾಡಿ ಪೋಲಿಯೋ ನಿರ್ಮೂಲನೆಯಲ್ಲಿ ನಮ್ಮ ಭಾರತ ದೇಶವು ಗಣನೀಯ ಪ್ರಗತಿಯ ಸಾಧಿಸಿದ್ದು, ಜನವರಿ 2011ರಿಂದ ಯಾವುದೇ ಹೊಸ ಪೋಲಿಯೋ ಪ್ರಕರಣ ಕಂಡುಬಂದಿಲ್ಲ. ಭಾರತವೀಗ ವಿಶ್ವ ಆರೋಗ್ಯ ಸಂಸ್ಥೆ ವತಿಯಿಂದ 'ಪೋಲಿಯೋ ಮುಕ್ತ ರಾಷ್ಟ್ರ' ಎಂಬ ಪ್ರಮಾಣ ಪತ್ರವನ್ನು 2014ರಲ್ಲಿಯೇ ಪಡೆದಿದೆ. 15 ಫೆಬ್ರುವರಿ 2016ಕ್ಕೆ ಪಾಕಿಸ್ತಾನ್, ಅಫ್ಘಾನಿಸ್ತಾನ್ ಮಾತ್ರ ಪೋಲಿಯೋ ಪೀಡಿತ ರಾಷ್ಟ್ರಗಳ ಪಟ್ಟಿಯಲ್ಲಿವೆ.

▸▸ 3ನೇ ಪುಟಕ್ಕೆ

ಪ್ರತಿ ತಾಲೂಕಾ ಮಟ್ಟದಲ್ಲಿ ಕಬ್ಬು ಕಟಾವು ತಂಡ, ಇಟ್ಟಿಗೆ ಭಟ್ಟಿ, ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿನ ಮಕ್ಕಳ ಸಂಖ್ಯೆ ಹೆಚ್ಚಾಗಿರುವುದರಿಂದ ಎಲ್ಲಾ ಪ್ರದೇಶಗಳನ್ನು ಸಮೀಕ್ಷೆ ಮಾಡಿ ಸೂಕ್ಷ್ಮ ಕ್ರಿಯಾ ಯೋಜನೆ ತಯಾರಿಸಲು ಎಲ್ಲಾ ತಾಲೂಕಾ ವೈದ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ತಿಳಿಸಿದರು.

### ಸಂವಿಧಾನ ಜಾಗೃತಿ ಜಾಥಾ: ಗದಗ ನಗರದಲ್ಲಿ ಬೈಕ್ ರ್‍ಯಾಲಿ ಆಯೋಜನೆಗೆ ಡಿ.ಸಿ ಸೂಚನೆ

# ಸಾರ್ವಜನಿರಲ್ಲಿ ಸಂವಿಧಾನ ಜಾಗೃತಿ ಮೂಡಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತದ ಸಂವಿಧಾನ ಅಂಗೀಕಾರಗೊಂಡು 75 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ, ಸಾರ್ವಜನಿಕರಲ್ಲಿ ಸಂವಿಧಾನದ ಮಹತ್ವ ಕುರಿತು ಜಾಗೃತಿ ಮೂಡಿಸಲು ಸಂವಿಧಾನ ಜಾಥಾಗೆ ಈಗಾಗಲೇ ಚಾಲನೆ ನೀಡಲಾಗಿದ್ದು, ಸಾರ್ವಜನಿಕರಲ್ಲಿ ಸಂವಿಧಾನದ ಕುರಿತು ಹೆಚ್ಚಿನ ಜಾಗೃತಿ ಮೂಡಿಸಲು ಬೈಕ್ ರ್‍ಯಾಲಿ ಆಯೋಜಿಸುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜರುಗಿದ ಸಂವಿಧಾನ ಜಾಗೃತಿ ಜಾಥಾ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗಣರಾಜ್ಯೋತ್ಸವ ದಿನಾಚರಣೆಯಂದು ಜಿಲ್ಲಾ ಉಸ್ತುವಾರಿ ಸಚಿವರಿಂದ ಚಾಲನೆಗೊಂಡ ಸಂವಿಧಾನ ಜಾಥಾ ರೂಪಕ ಈಗಾಗಲೇ



ಜಿಲ್ಲಾದ್ಯಂತ ಸಂಚಾರ ಕೈಗೊಳ್ಳುತ್ತಿದೆ. ಸಂವಿಧಾನದ ಮೂಲ ಆಶಯಗಳ ಕುರಿತು ಸಾರ್ವಜನಿರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲು ನಗರದಲ್ಲಿ ಬೈಕ್ ರ್‍ಯಾಲಿ ಆಯೋಜಿಸಿ, ರ್‍ಯಾಲಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಪಾಲ್ಗೊಳ್ಳುವಂತೆ ಕ್ರಮ ವಹಿಸಬೇಕೆಂದು ತಿಳಿಸಿದರು.

ಜಿಲ್ಲಾ ಮಟ್ಟದ ಹಾಗೂ ಗದಗ ತಾಲೂಕಿನ ಎಲ್ಲ ಇಲಾಖಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಜಿಲ್ಲಾಡಳಿತದಿಂದ ಆರಂಭವಾಗುವ ಸಂವಿಧಾನ ಜಾಗೃತಿ ಬೈಕ್ ರ್‍ಯಾಲಿಯಲ್ಲಿ ತಪ್ಪದೇ ಪಾಲ್ಗೊಳ್ಳಬೇಕು. ಇಲಾಖೆ ವಾಹನಗಳನ್ನು ಬಳಸಿಕೊಂಡು ಸಂವಿಧಾನ ಜಾಗೃತಿ ಮೂಡಿಸುವ ಕಾರ್ಯಕ್ಕೆ ಇಲಾಖೆಯ ನೌಕರರು ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಸೂಚಿಸಿದರು.

ಬೈಕ್ ರ್‍ಯಾಲಿಯ ಮಾರ್ಗ, ಕ್ರಮಿಸಬೇಕಾದ ದೂರದ ಬಗ್ಗೆ ವಿಸ್ತೃತವಾದಂತಹ ರೂಪು ರೇಷೆಗಳನ್ನು ಹಾಗೂ ಸಂವಿಧಾನದ ಮಹತ್ವ ಸಾರುವ ಫಲಕಗಳನ್ನು ಸಿದ್ಧಪಡಿಸುವಂತೆ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಜಿ.ಪಂ ಮುಖ್ಯ ಯೋಜನಾಧಿಕಾರಿ ನಿರ್ಮಲಾ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರಶಾಂತ ವರಗಪ್ಪನವರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಾಕ್ಷಿ ಸುಭಾಷಿತ

ಸಾಧ್ಯವಾದರೆ ಹತ್ತು ಜನರಿಗೆ ನೆರವಾಗು, ಆಗದಿದ್ದರೆ ಹಾದಿಯಲ್ಲಿ ಕಾಣುವ ಗಾಜಿನ ಚೂರನ್ನಾದರೂ ಹೆಕ್ಕಿ ಕಸದ ತೊಟ್ಟಿಗೆ ಹಾಕು.

–ಕಣ್ಣದಾಸನ್

## ಸಂಪಾದಕೀಯ

# ಮತ್ತೆ ಜನಪ್ರಿಯ ಬಜೆಟ್ ಮಂಡಿಸಲಿರುವ ಸಿದ್ದರಾಮಯ್ಯ

ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲಿ ಪ್ರತಿಭಟನೆಗೆ ಮುಂದಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಆದಿಯಾಗಿ, ರಾಜ್ಯದ ಕಾಂಗ್ರೆಸ್ ನಾಯಕರು ಎಲ್ಲರೂ ದೆಹಲಿಯತ್ತ ದೌಡಾಯಿಸುತ್ತಿದ್ದಾರೆ.

ಮತ್ತೊಂದೆಡೆ ರಾಜ್ಯ ಬಜೆಟ್ ಮಂಡಿಸುವ ದಿನ ಹತ್ತಿರವಾಗುತ್ತಿದೆ. ಇದೇ ಫೆಬ್ರವರಿ 16 ರಂದು ರಾಜ್ಯ ಬಜೆಟ್ ಮಂಡನೆಗೆ ಸಿದ್ದರಾಮಯ್ಯ ಸರ್ವ ರೀತಿಯಲ್ಲಿ ಸನ್ನದ್ಧರಾಗುತ್ತಿದ್ದಾರೆ. ನಿರೀಕ್ಷೆಯಂತೆ ಈ ಬಜೆಟ್ ನಲ್ಲಿಯೂ ಜನಪ್ರಿಯ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ.

ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ಈಗಾಗಲೇ ರಾಜ್ಯದ ಜನರ ಗಮನ ಸೆಳೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಬಜೆಟ್ ನಲ್ಲಿ ಯಾವ ರೀತಿಯ ಯೋಜನೆಗಳನ್ನ ಅನುಷ್ಠಾನಗೊಳಿಸಲಿದ್ದಾರೆ ಎನ್ನುವ ಕುತೂಹಲ ರಾಜ್ಯದ ಜನರಲ್ಲಿ ಮೂಡಿದೆ.

ಸಿದ್ದರಾಮಯ್ಯ ಈ ಹಿಂದಿನ ಅಧಿಕಾರಾವಧಿಯಲ್ಲಿ ಅನೇಕ ಭಾಗ್ಯಗಳನ್ನ ಕೊಟ್ಟು ಜನಮನ ಸೆಳೆದಿದ್ದರು. ಅದರ ಮುಂದುವರಿದ ಭಾಗವಾಗಿ ಗ್ಯಾರಂಟಿ ಕಾರ್ಯಕ್ರಮಗಳು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಅನುಕೂಲ ಕಲ್ಪಿಸಿವೆ.

ಪ್ರಸ್ತುತ ಬಜೆಟ್‌ನಲ್ಲಿ ಬಡವರಿಗೆ ಬೇಕಾಗಿರುವ ಸೂರು ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ ಘೋಷಣೆಗಳಾಗಬೇಕಿದೆ. ಬೆಲೆ ಏರಿಕೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕಠಿಣ ಕ್ರಮಗಳನ್ನ ಕೈಗೊಳ್ಳಬೇಕಿದೆ. ರಸ್ತೆ ಮತ್ತು ಸಾರಿಗೆ ವ್ಯವಸ್ಥೆಯಲ್ಲಿ ಬಹುದೊಡ್ಡ ಬದಲಾವಣೆಗಳು ಆಗಬೇಕಿವೆ. ಮುಖ್ಯವಾಗಿ ಮೂಲ ಸೌಕರ್ಯ ಕೊರತೆ ನೀಗಿಸುವ ನಿಟ್ಟಿನಲ್ಲಿ ಮತ್ತೊಂದು ಗ್ಯಾರಂಟಿ ಕಾರ್ಯಕ್ರಮ ಘೋಷಣೆಯಾಗಿ, ಅದು ಅನುಷ್ಠಾನಕ್ಕೆ ಬಂದಲ್ಲಿ ಕರ್ನಾಟಕ ಮಾದರಿ ರಾಜ್ಯವಾಗಲಿದೆ. ಹೊಸ ಬಜೆಟ್ ಆ ಎಲ್ಲ ನಿರೀಕ್ಷೆಗಳನ್ನು ಸಾಕಾರಗೊಳಿಸಲಿ.

### ಪ್ರೀತಿಯ ಹಣತೆ ಹಚ್ಚಿ ಭಾವದ ಬೆಳಕು ತೋರಿದ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ

# ಸಾಮಗಾನದ ಅಸಾಮಾನ್ಯ ಕವಿ

ಉತ್ಕೃಷ್ಟ ಕವಿಯಾಗಿ, ಪ್ರಬುದ್ಧ ವಿಮರ್ಶಕರಾಗಿ, ಸಂಪಾದಕರಾಗಿ, ಉತ್ತಮ ಅಧ್ಯಾಪಕರಾಗಿ, ದಕ್ಷ ಆಡಳಿತಗಾರರಾಗಿ, ಸಂಘಟಕರಾಗಿ, ಕನ್ನಡದ ಹಿತರಕ್ಷಕರಾಗಿ, ಸ್ನೇಹ ಜೀವಿಯಾಗಿ, ಶಿಷ್ಯ ವತ್ಸಲರಾಗಿ, ಮಾನವತಾವಾದಿಯಾಗಿ ಬಾಳಿದ ಜಿ.ಎಸ್. ಶಿವರುದ್ರಪ್ಪನವರು ಕನ್ನಡದ ಹೆಮ್ಮೆಯ ಕವಿ. ಇಂದು ಕನ್ನಡಿಗರ ಭಾವದೊರೆ ಡಾ. ಜಿ.ಎಸ್.ಎಸ್ ಅವರ 98ನೇ ಜನ್ಮ ಜಯಂತಿ.

ಕನ್ನಡದ ಮೂರನೆಯ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಜನಿಸಿದ್ದು ಫೆಬ್ರುವರಿ 7, 1926ರಲ್ಲಿ. ಮಲೆನಾಡು ಹಾಗೂ ಅರೆ ಮಲೆನಾಡು ಸೀಮೆಯ ಗಡಿ ಶಿಕಾರಿಪುರ ತಾಲೂಕಿನ ಈಸೂರು ಗ್ರಾಮದಲ್ಲಿ ಇವರ ಜನನ. ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದ ಶಾಂತವೀರಪ್ಪ ಹಾಗೂ ವೀರಮ್ಮ ದಂಪತಿಯ ಮಗನಾಗಿ ಹುಟ್ಟಿದ ಶಿವರುದ್ರಪ್ಪನವರದ್ದು ಸಾಮಾನ್ಯ ಹಿನ್ನೆಲೆಯ ಕುಟುಂಬ. ಆದರೆ ಮನೆಯಲ್ಲಿ ಶೈಕ್ಷಣಿಕ ಹಾಗೂ ಸಾಹಿತ್ಯಕ ವಾತಾವರಣವಿತ್ತು.

ಡಾ. ಜಿ.ಎಸ್. ಶಿವರುದ್ರಪ್ಪ ಅವರನ್ನು ನವೋದಯ ಸಾಹಿತ್ಯದ ಶ್ರೇಷ್ಠರು ಅಂತಷ್ಟೇ ಅನ್ನಲಾಗದು. ಅವರು ಹೊಸಗನ್ನಡ ಶೈಲಿಯ ಪ್ರಮುಖ ಕವಿ, ಸೂಕ್ಷ್ಮ ದೃಷ್ಟಿಕೋನ ಹೊಂದಿದ್ದ ವಿಮರ್ಶಕ, ಸಂಶೋಧಕ, ನಾಟಕಕಾರ, ಅತ್ಯುತ್ತಮ ಪ್ರಾಧ್ಯಾಪಕ, ಸಮರ್ಥ ಆಡಳಿತಗಾರ, ವಿಶ್ವಮಾನವ ಸಂದೇಶ ಸಾರಿದ ಕುವೆಂಪು ಅವರ ಮೆಚ್ಚಿನ ಶಿಷ್ಯರೂ ಆಗಿದ್ದರು.

ಕನ್ನಡ ಭಾವಗೀತೆಗಳ ಪರಂಪರೆಗೆ ಹೊಸ ಆಯಾಮ ಕೊಟ್ಟವರು ಕವಿ ಜಿಎಸ್‌ಎಸ್. ನವ್ಯದ ಅರ್ಥವಾಗದ ಕ್ಲಿಷ್ಟ ಸಾಹಿತ್ಯದ ಸಂಕಟದಲ್ಲಿದ್ದ ಸಾಹಿತ್ಯಾಸಕ್ತರಿಗೆ ಸರಳವಾಗಿ ಅರ್ಥವಾಗುವ ಮಧುರ ಭಾವಗೀತೆಗಳ ಉಡುಗೊರೆ ಕೊಟ್ಟ ಕವಿ ಶ್ರೇಷ್ಠರು.

'ಹತ್ತಿರವಿದ್ದೂ ದೂರ ನಿಲ್ಲುವೆವು ನಮ್ಮ ಅಹಮ್ಮಿನ ಕೋಟೆಯಲಿ; ಎಷ್ಟು ಕಷ್ಟವೋ ಹೊಂದಿಕೆಯೆಂಬುದು ನಾಲ್ಕುದಿನದ ಈ ಬದುಕಿನಲಿ' ಎಂದು ಬರೆಯುವ ಮೂಲಕ ನಮ್ಮೆಲ್ಲರೊಳಗಿನ ಅಹಂಕಾರದ ಕರಾಳತೆಯನ್ನು ತೆರೆದಿಟ್ಟಿದ್ದಾರೆ. 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ, ಹಾಡುವುದು ಅನಿವಾರ್ಯ ಕರ್ಮ ನನಗೆ; ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ' ಎನ್ನುವ ಕವಿ ಜಿಎಸ್‌ಎಸ್ ತಮ್ಮತನ, ತಮ್ಮ ಕಾವ್ಯ ಹಾಗೂ ತಮ್ಮ ಒಳತೋಟಿಯ ಬಗ್ಗೆ ತಮಗಿರುವ ಅಭಿಮಾನವನ್ನು ತೋರ್ಪಡಿಸಿದ್ದಾರೆ.

ಹಸ್ತಪ್ರತಿಗಳ ಸಂಗ್ರಹಣೆ ಹಾಗೂ ರಕ್ಷಣೆಗಳ ಬಗ್ಗೆ ಜಿಎಸ್‌ಎಸ್ ಅವರಿಗೆ ವಿಶೇಷ ಕಾಳಜಿಯಿತ್ತು. 1971ರಲ್ಲಿ ಕನ್ನಡ ಅಧ್ಯಯನ ಕೇಂದ್ರದಲ್ಲಿ 'ಹಸ್ತಪ್ರತಿ ವಿಭಾಗ'ವನ್ನು ಪ್ರಾರಂಭಿಸಿದವರೇ ಡಾ. ಜಿಎಸ್ ಶಿವರುದ್ರಪ್ಪ. ಕೇವಲ 4 ವರ್ಷಗಳಲ್ಲಿ 3000ಕ್ಕೂ ಹೆಚ್ಚು ಓಲೆಗರಿಗಳು ಹಾಗೂ 1000ಕ್ಕೂ ಹೆಚ್ಚು ಕಾಗದದ ಹಸ್ತ ಪ್ರತಿಗಳನ್ನು ಇಲ್ಲಿ ಸಂಗ್ರಹಿಸಲಾಯಿತು.



ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ರಾಯಬಾರಿಯಂತಿದ್ದ ಡಾ ಜಿ.ಎಸ್. ಶಿವರುದ್ರಪ್ಪ ತಮ್ಮ 87ನೇ ವಯಸ್ಸಿನಲ್ಲಿ ತಮ್ಮ ಭಾವ ಯಾನ ಕೊನೆಗೊಳಿಸಿದರು. ಅಪಾರ ಅಭಿಮಾನ ಹೊತ್ತು 23 ಡಿಸೆಂಬರ್ 2013ರಂದು ಬೆಂಗಳೂರಿನಲ್ಲಿನ ತಮ್ಮ ಬನಶಂಕರಿಯ ನಿವಾಸದಲ್ಲಿ ಕೊನೆಯುಸಿರೆಳೆದರು. ಜಿ.ಎಸ್. ಶಿವರುದ್ರಪ್ಪನವರ ಆಣತಿಯಂತೆಯೆ ಅವರ ಅಂತ್ಯ ಸಂಸ್ಕಾರದ ವಿಧಿ–ವಿಧಾನವನ್ನು ಬೆಂಗಳೂರು ವಿ.ವಿ. ಸಮೀಪವಿರುವ ಕಲಾಗ್ರಾಮದಲ್ಲಿ ಸಕಲ ಸರ್ಕಾರಿ ಗೌರವಾದರಗಳೊಂದಿಗೆ ನೆರವೇರಿಸಲಾಯಿತು.

ನಾಡೋಜ ಜಿ.ಎಸ್. ಶಿವರುದ್ರಪ್ಪನವರ ಸಾಹಿತ್ಯ ಕೃಷಿಗೆ ಅರಸಿ ಬಂದ ಪ್ರಶಸ್ತಿ ಫಲಕಗಳು, ಬಿರುದು–ಬಾವಲಿಗಳ ಪಟ್ಟಿ ದೊಡ್ಡದಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ಪಂಪ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಅನಕೃ ಪ್ರತಿಷ್ಠಾನ ಪ್ರಶಸ್ತಿ, ಪ್ರೊ. ಭೂಸನೂರಮಠ ಪ್ರಶಸ್ತಿ, ಗೊರೂರು ಪ್ರಶಸ್ತಿ, ಹಂಪಿ ಕನ್ನಡ ವಿ.ವಿಯಿಂದ ನಾಡೋಜ ಗೌರವ ಡಾಕ್ಟರೇಟ್, ಮೈಸೂರು ವಿ.ವಿಯಿಂದ ಗೌರವ ಡಿ.ಲಿಟ್, ರಾಷ್ಟ್ರಕವಿ ಪುರಸ್ಕಾರ, ಕುವೆಂಪು ವಿ.ವಿಯಿಂದ ಗೌರವ ಡಿ.ಲಿಟ್., ಬೆಂಗಳೂರು ವಿ.ವಿಯಿಂದ ಗೌರವ ಡಿ.ಲಿಟ್, ಕುವೆತ್ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆ, ನೃಪತುಂಗ ಪ್ರಶಸ್ತಿಗಳು ರಾಷ್ಟ್ರಕವಿಯ ಮನೆ ಬಾಗಿಲು ತಟ್ಟಿವೆ. ನವೆಂಬರ್ 1, 2006ರ ಸುವರ್ಣ ಕರ್ನಾಟಕ ರಾಜ್ಯೋತ್ಸವದಂದು ಶಿವರುದ್ರಪ್ಪನವರನ್ನು 'ರಾಷ್ಟ್ರಕವಿ' ಎಂದು ಘೋಷಿಸಲಾಯಿತು.

ನಿವೃತ್ತಿ ನಂತರವೂ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಕುವೆಂಪು ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಶಿವರುದ್ರಪ್ಪನವರು ಗಣನೀಯ ಸೇವೆ ಸಲ್ಲಿಸಿದ್ದರು. ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ, ರಾಜ್ಯ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ, ದೆಹಲಿಯ ರಾಷ್ಟ್ರೀಯ ಕವಿ ಸಮ್ಮೇಳನ, ತುಮಕೂರಿನ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿ, ಮದರಾಸಿನ ಕನ್ನಡ ಸಮ್ಮೇಳನದ ಅಧ್ಯಕ್ಷರಾಗಿ, 1992ರ ದಾವಣಗೆರೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಜಿಎಸ್‌ಎಸ್ ಕನ್ನಡ ಸಾಹಿತ್ಯ ಕ್ಷೇತ್ರದ ಧ್ರುವ ನಕ್ಷತ್ರದಂತೆ ಹೊಳೆದಿದ್ದಾರೆ.

ನವೋದಯದ ಕಾವ್ಯ ಪ್ರಕಾರದಲ್ಲಿ ವಿಶೇಷ ಹೆಸರು ಮಾಡಿದ, ಭಾವಗೀತೆಗಳ ಮೂಲಕ ಕಾವ್ಯಪ್ರಿಯರ ಹೃದಯಕ್ಕೆ ಆಪ್ತರಾದ, ಕನ್ನಡದ ಮೂರನೆಯ ರಾಷ್ಟ್ರಕವಿ ಅನ್ನುವ ಹೆಗ್ಗಳಿಕೆ ಹೊಂದಿದ್ದ ಡಾ. ಜಿ.ಎಸ್. ಶಿವರುದ್ರಪ್ಪ ಭೌತಿಕವಾಗಿ ಮರೆಯಾದರೂ ಭಾವಗೀತೆಗಳ ಜೀವಂತಿಕೆಯ ಸಾಕಾರವಾಗಿ ಸದಾಕಾಲ ಜೀವಂತವಾಗಿರುತ್ತಾರೆ.



**– ಈಶ್ವರ ಎಸ್.ಮೆಡ್ಲೇರಿ.**
ಅಧ್ಯಕ್ಷರು, ಕಸಾಪ–ಲಕ್ಷ್ಮೇಶ್ವರ.

# ಡಿ.ಕೆ. ಸುರೇಶ ತಮ್ಮ ಹೇಳಿಕೆ ಹಿಂಪಡೆಯಲಿ

**■ವಿಜಯಸಾಕ್ಷಿ ಸುದ್ದಿ, ಗದಗ**



ಡಿ.ಕೆ. ಸುರೇಶ ಅವರು ಇತ್ತೀಚೆಗೆ ನೀಡಿರುವ ದಕ್ಷಿಣ ಭಾರತ ಇಬ್ಭಾಗ ಹೇಳಿಕೆ ಭಾರತ ದೇಶದ 140 ಕೋಟಿ ಜನತೆಗೆ ಮಾಡಿದ ಅಪಮಾನವಾಗಿದೆ. ತಾವು ಒಬ್ಬ ಭಾರತ ದೇಶದ ಸಂಸದರಾಗಿದ್ದು, ಪ್ರಮಾಣವಚನ ಸ್ವೀಕರಾದ ಸಂದರ್ಭದಲ್ಲಿ ಸಂವಿಧಾನ ಪ್ರಮಾಣವಾಗಿ ದೇಶದ ಅಖಂಡತೆಯನ್ನು ಎತ್ತಿಹಿಡಿಯುತ್ತೇನೆ ಎಂದು ಪ್ರಮಾಣ ಮಾಡಿರುವುದನ್ನು ಅವರು ಮರೆತಿರುವಂತಿದೆ ಎಂದು ಬಿಜೆಪಿ ಗದಗ ಜಿಲ್ಲಾಧ್ಯಕ್ಷ ತೋಟಪ್ಪ(ರಾಜು) ಕುರುಡಗಿ ಹೇಳಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಶ್ವದ ಶ್ರೇಷ್ಠ ನಾಯಕ, ಭಾರತದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರು ಒಂದು ದಶಕದಿಂದ ಭಾರತದ ಅಭಿವೃದ್ಧಿಗೆ ಶ್ರಮಿಸುತ್ತಿರುವುದನ್ನು ಕಾಂಗ್ರೆಸ್‌ಗೆ ಸಹಿಸಲಾಗುತ್ತಿಲ್ಲ. 70 ವರ್ಷಗಳ ಕಾಲ ದೇಶ ಆಳಿದರೂ ದೇಶದ ಅಭಿವೃದ್ಧಿ ಮಾಡದ ಕಾಂಗ್ರೆಸ್ ಈ ರೀತಿಯ ದೇಶ ಒಡೆಯುವ ಮನಸ್ಥಿತಿಯಲ್ಲಿದೆ. ಇದಕ್ಕೆ ದೇಶದ ಜನರು ಕಾಂಗ್ರೆಸ್‌ಗೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡುತ್ತಾರೆ. ಡಿ.ಕೆ. ಸುರೇಶರು ತಮ್ಮ ಹೇಳಿಕೆ ಹಿಂಪಡೆದು ದೇಶದ ಜನರ ಕ್ಷಮೆ ಯಾಚಿಸಬೇಕೆಂದು ಆಗ್ರಹಿಸಿದ್ದಾರೆ.

### ಸುಕ್ಷೇತ್ರ ಬಳಗಾನೂರಿನ ಶ್ರೀ ಶಿವಶಾಂತವೀರ ಶರಣರ ಸದ್ಭಾವನಾ ಪಾದಯಾತ್ರೆ, ತುಲಾಭಾರ

# ಸದ್ಗುಣಗಳೊಂದಿಗೆ ಸಾರ್ಥಕತೆ ಪಡೆಯಬೇಕು

**■ವಿಜಯಸಾಕ್ಷಿ ಸುದ್ದಿ, ಗದಗ**

ತಾಲೂಕಿನ ಸುಕ್ಷೇತ್ರ ಬಳಗಾನೂರಿನ ಚಿಕೇನಕೊಪ್ಪದ ಚನ್ನವೀರಶರಣರ 29ನೇ ಪುಣ್ಯಸ್ಮರಣೋತ್ಸವ ಜಾತ್ರಾ ಮಹೋತ್ಸವದ ಅಂಗವಾಗಿ ರೋಣ ತಾಲೂಕ ಡ.ಸ. ಹಡಗಲಿ ಗ್ರಾಮದಲ್ಲಿ ಸುಕ್ಷೇತ್ರ ಬಳಗಾನೂರಿನ ಪೂಜ್ಯ ಶ್ರೀ ಶಿವಶಾಂತವೀರ ಶರಣರಿಂದ ಸದ್ಭಾವನಾ ಪಾದಯಾತ್ರೆ ಮತ್ತು ತುಲಾಭಾರ ಕಾರ್ಯಕ್ರಮ ಜರುಗಿತು.



ಶ್ರೀ ಶಿವಶಾಂತವೀರ ಶರಣರು ಆಶೀರ್ವಚನ ನೀಡಿ, ಮನುಷ್ಯನು ದೇಹ ಅನಿತ್ಯವಾಗಿದೆ. ಶರೀರದ ಬೆಲೆ ಹೆಚ್ಚಾಗಲು ಒಳ್ಳೆಯ ಗುಣಗಳನ್ನು ಹೊಂದಿ, ಪುಣ್ಯ ಕಾರ್ಯಗಳನ್ನು ಮಾಡಿ ಬದುಕು ಕಟ್ಟಿಕೊಳ್ಳಬೇಕು. ಭಕ್ತಿ, ಜ್ಞಾನ, ದೊಡ್ಡವರ ಮಾತುಗಳು ಆಶ್ರಯವಾದಾಗ ಸಹಜವಾಗಿ ನಮ್ಮ ಮೌಲ್ಯ ಹೆಚ್ಚಾಗುವುದು. ನಮ್ಮ ಜೀವಿತಾವಧಿ ನಂತರ ನಾವು ಗಳಿಸಿದ ಸಂಪತ್ತು, ಬಂಧು–ಬಳಗ ಯಾರೂ ನಮ್ಮೊಂದಿಗೆ ಬರುವುದಿಲ್ಲ. ಮಾಡಿದ ಪುಣ್ಯ ಕಾರ್ಯಗಳೇ ನಮ್ಮ ಬದುಕಿಗೆ ಸುಂದರತೆಯನ್ನು ತಂದುಕೊಡುತ್ತದೆ. ಆ ದಿಸೆಯಲ್ಲಿ ಉತ್ತಮ ಚಟುವಟಿಕೆಗಳನ್ನು ಮೈಗೂಡಿಸಿಕೊಂಡು ಜೀವನದ ಸಾರ್ಥಕತೆ ಪಡೆಯಬೇಕೆಂದರು.

ಇಂದು ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡುವುದು ಸಹ ಅವಶ್ಯವಿದೆ. ಮಕ್ಕಳಿಗೆ ಆಸ್ತಿ ಮಾಡುವುದು ತಪ್ಪಲ್ಲ. ಆದರೆ, ಮಾಡಿದ ಆಸ್ತಿಯನ್ನು ಹಾಳು ಮಾಡಬಹುದು. ಆದರೆ ನೀಡಿದ ವಿದ್ಯೆ, ಸಂಸ್ಕಾರ ಜೀವನ ಮಟ್ಟವನ್ನು ಎತ್ತರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸ್ಥಳೀಯ ಯುವಕರಾದ ಅಂದಾನಯ್ಯ ಅರವಟಗಿಮಠ, ವಚನ ಸಾಹಿತ್ಯದಲ್ಲಿ ಹಾಗೂ ರಮೇಶ ಕಂಪ್ಲಿ ಅರ್ಥಶಾಸ್ತ್ರದಲ್ಲಿ ಪಿಎಚ್‌ಡಿ ಪದವಿ ಪಡೆದಿರುವುದು ಹೆಮ್ಮೆಯ ಸಂಗತಿ ಎಂದರು.

ಮಲ್ಲಸಮುದ್ರದ ಓಂಕಾರೇಶ್ವರ ಮಠದ ಷ.ಬ್ರ. ಶ್ರೀ ಫಕ್ಕೀರೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಸಮ್ಮುಖ ವಹಿಸಿ ಆಶೀರ್ವಚನ ನೀಡಿದರು. ಡ.ಸ. ಹಡಗಲಿಯ ಸದ್ಭಕ್ತರಿಂದ ಶ್ರೀ ಶಿವಶಾಂತವೀರ ಶರಣರ ತುಲಾಭಾರದ ಭಕ್ತಿ ಸೇವೆ ಜರುಗಿತು. ಶಿವಲಿಂಗಶಾಸ್ತ್ರೀ ಸಿದ್ದಾಪೂರ ಸಂಚಾಲಕತ್ವ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪಿಎಚ್‌ಡಿ ಪಡೆದ ಅಂದಾನಯ್ಯ ಅರವಟಗಿಮಠ ಹಾಗೂ ಹೊಂಬಳದ ಭಜನಾ ಸಂಘದ ಬಸವರಾಜ ಹುಣಸೀಕಟ್ಟಿ ಅವರನ್ನು ಸನ್ಮಾನಿಸಲಾಯಿತು.

ಹೊಂಬಳದ ಭಜನಾ ಮಂಡಳಿ ಹಾಗೂ ಡ.ಸ. ಹಡಗಲಿ ಗ್ರಾಮದ ಸಮಸ್ತ ಸದ್ಭಕ್ತರು, ತಾಯಂದಿರು ಸದ್ಭಾವ ಪಾದಯಾತ್ರೆಯಲ್ಲಿ ಪೂರ್ಣ ಕುಂಭಮೇಳದೊಂದಿಗೆ ಶ್ರದ್ಧಾ ಭಕ್ತಿಯಿಂದ ಭಾಗವಹಿಸಿದ್ದರು.

# ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದಲ್ಲಿ ರೈತರಿಗೆ ವಿತರಿಸುವ ಉದ್ದೇಶದಿಂದ ಗದಗ ಜಿಲ್ಲೆ ಸಾಮಾನ್ಯ ವರ್ಗ ಘಟಕದ ವೈಯಕ್ತಿಕ ಫಲಾನುಭವಿಗೆ 1 ಕಂಬೈನರ್ ಹಾರ್ವೆಸ್ಟರ್ ಹಬ್ ಕ್ರಿಯಾ ಯೋಜನೆ ಅನುಮೋದನೆಗೊಂಡಿದೆ. ಸದರಿ ಹಬ್‌ನಲ್ಲಿ ಕಡ್ಡಾಯವಾಗಿ ಕಂಬೈನರ್ ಹಾರ್ವೆಸ್ಟರ್ ಮತ್ತು ಟ್ರಾಕ್ಟರ್ ಆಪರೇಟೆಡ್ ಬೇಲರ್ಸ್ ಇರತಕ್ಕದ್ದು. ಸದರಿ ಯೋಜನೆಯಡಿ ಸಾಮಾನ್ಯ ವರ್ಗ ಘಟಕದಡಿ ವೈಯಕ್ತಿಕ ಫಲಾನುಭವಿಗೆ ಗರಿಷ್ಠ 40 ಲಕ್ಷ (ಶೇ. 50% ಸಹಾಯಧನ) ಇರುತ್ತದೆ. ಆಸಕ್ತ ರೈತರು ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಫೆಬ್ರುವರಿ 20 ರೊಳಗಾಗಿ ಆಯಾ ತಾಲೂಕಿನಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸುವುದು. ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ, ಜಿಲ್ಲಾ ಮಟ್ಟದ ಉಪಕರಣ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಉಪ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು. ನಂತರ ಉಪ ಕೃಷಿ ನಿರ್ದೇಶಕರ ಕಚೇರಿಯಿಂದ ಸ್ವೀಕೃತಗೊಂಡ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾ ಮಟ್ಟದ ಉಪಕರಣ ಸಮಿತಿಯಲ್ಲಿ ಮಂಡಿಸಲಾಗುವುದು. ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಒಂದೇ ಹಬ್‌ಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿ ಅರ್ಹಗೊಂಡಲ್ಲಿ ಲಾಟರಿ ಮುಖಾಂತರ ಫಲಾನುಭವಿಯನ್ನು ಆಯ್ಕೆ ಮಾಡಲಾಗುವುದು. ನಂತರ ಜಂಟಿ ಕೃಷಿ ನಿರ್ದೇಶಕರ ಕಚೇರಿಯಿಂದ ಅಯ್ಕೆಯಾದ ಫಲಾನುಭವಿಗೆ ಕೃಷಿ ಯಂತ್ರೋಪಕರಣಗಳನ್ನು ದಾಸ್ತಾನೀಕರಿಸಲು ಕಾರ್ಯಾದೇಶ ನೀಡಲಾಗುವುದು. ಹಲವಾರು ಸ್ವೀಕೃತವಾದ ಯಂತ್ರೋಪಕರಣಗಳನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರ ಮತ್ತು ತಾಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿ, ಸಹಾಯಧನವನ್ನು ನಿಯಮಾನುಸಾರ ಸಂಬಂಧಿಸಿದ ಸಾಲದ ಬ್ಯಾಂಕ್ ಖಾತೆಗೆ ಕ್ರೆಡಿಟ್ ಲಿಂಕಡ್ ಬ್ಯಾಂಕ್ ಎಂಡೆಡ್ ಸಬ್ಸಿಡಿ ಮೂಲಕ ಜಮಾ ಮಾಡಲಾಗುವುದು.

ಫಲಾನುಭವಿಗಳು ಅರ್ಜಿಯೊಂದಿಗೆ ಪಹಣಿ ಪ್ರತಿ, ಆಧಾರ್ ಕಾರ್ಡ್ ಪ್ರತಿ, ಬ್ಯಾಂಕ್ ಪಾಸ್ ಬುಕ್ ಪ್ರತಿ ಮತ್ತು ಎಫ್.ಐ.ಡಿ. ಸಂಖ್ಯೆ, ರೂ.20 ಚಾಪಾ ಕಾಗದದ ಮೇಲೆ ಹಬ್ ನ್ನು ಪರಭಾರೆ ಮಾಡುವುದಿಲ್ಲವೆಂದು ಮುಚ್ಚಳಿಕೆ ಪತ್ರ ( ನೋಟರಿಯೊಂದಿಗೆ) , ಸಹಾಯಧನವು ಕ್ರೆಡಿಟ್ ಲಿಂಕ್‌ಡ ಬ್ಯಾಕ್ ಎಂಡೆಡ್ ಸಬ್ಸಿಡಿ ಆಗಿರುವುದರಿಂದ ಸಂಬಂಧಿಸಿರುವ ಬ್ಯಾಂಕ್‌ನಿಂದ ತಾತ್ವಿಕ ಸಾಲ ಮಂಜೂರಾತಿ ಪತ್ರ ( ಇನ್ ಪ್ರಿನ್ಸಿಪಲ್ ಲೋನ್ ಸ್ಯಾಂಕ್ಷನ್ ಲೆಟರ್ ) ಇವುಗಳನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

### ಅರ್ಧಕ್ಕೇ ನಿಂತ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ಕಟ್ಟಡ ಕಾಮಗಾರಿ

# ವಿದ್ಯಾರ್ಥಿಗಳಿಗಿಲ್ಲ ಹೊಸ ಕಟ್ಟಡದ ಭಾಗ್ಯ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದಲ್ಲಿ 4 ವರ್ಷಗಳಿಂದ ನಿರ್ಮಾಣಗೊಳ್ಳುತ್ತಿರುವ ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ಕಟ್ಟಡ ಕಾಮಗಾರಿ ಕಳೆದ ಒಂದು ವರ್ಷದಿಂದ ಅರ್ಧಕ್ಕೇ ನಿಂತಿದ್ದು, ವಸತಿ ನಿಲಯದ ವಿದ್ಯಾರ್ಥಿಗಳಿಗೆ ಹೊಸ ಕಟ್ಟಡ ಭಾಗ್ಯ ಲಭಿಸದೇ ಸೌಲಭ್ಯ ವಂಚಿತರಾಗಿದ್ದಾರೆ.



ಪಟ್ಟಣದ ಇಟ್ಟಿಕೇರಿ ಬಳಿ 2020ರಲ್ಲಿಯೇ 3.12 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಪ್ರಾರಂಭವಾಗಿದೆ. ಗುತ್ತಿಗೆ ಪಡೆದ ಕ್ರೈಸ್ ಸಂಸ್ಥೆಯವರು ನಿಗದಿಯಂತೆ 18 ತಿಂಗಳ ಅವಧಿಯಲ್ಲಿ ಮುಗಿಸಬೇಕಿದ್ದ ಕಾಮಗಾರಿ 3 ವರ್ಷ ಕಳೆದರೂ ಪೂರ್ಣಗೊಳಿಸಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು, ಗುತ್ತಿಗೆದಾರರಿಗೆ ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಕಾಮಗಾರಿ ಮಾತ್ರ ಪ್ರಾರಂಭವಾಗಿಲ್ಲ. ಸರ್ಕಾರ ಗ್ರಾಮೀಣ ಭಾಗದ ಬಡ ಮತ್ತು ಹಿಂದುಳಿದ ವರ್ಗದ ಮಕ್ಕಳ ಶಿಕ್ಷಣಕ್ಕಾಗಿ ಕೋಟ್ಯಾಂತರ ರೂ. ಅನುದಾನ ಕಲ್ಪಿಸಿದರೂ ಅಧಿಕಾರಿಗಳ, ಗುತ್ತಿಗೆದಾರರ ನಿರ್ಲಕ್ಷದಿಂದ ಉದ್ದೇಶಗಳು ಈಡೇರುತ್ತಿಲ್ಲ. ಸ್ಥಳೀಯ ಶಾಸಕರು, ಜಿಲ್ಲಾಧಿಕಾರಿಗಳು ಈ ಬಗ್ಗೆ ಗಮನ ಹರಿಸಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿದರೆ ಬರುವ ಶೈಕ್ಷಣಿಕ ವರ್ಷಕ್ಕಾದರೂ 100 ಬಡ ವಿದ್ಯಾರ್ಥಿಗಳು ಪೂರಕ ಸೌಲಭ್ಯದಿಂದ ಕೂಡಿದ ಹಾಸ್ಟೇಲ್‌ನಲ್ಲಿ ಓದಲು ಅವಕಾಶ ಕಲ್ಪಿಸಿದಂತಾಗುತ್ತದೆ ಎಂಬುದು ಪಾಲಕರ ಮತ್ತು ವಿದ್ಯಾರ್ಥಿಗಳ ಒತ್ತಾಸೆ.

ಕಳೆದ ಹಲವು ವರ್ಷಗಳಿಂದ ಡಿ. ದೇವರಾಜ ಅರಸು ಬಾಲಕಿಯರ ವಸತಿ ನಿಲಯ ಪಟ್ಟಣದ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮುಖ್ಯವಾಗಿ 100 ವಿದ್ಯಾರ್ಥಿಗಳಿರಬಹುದಾದ ಈ ವಸತಿ ನಿಲಯಕ್ಕೆ ಸ್ವಂತ ಕಟ್ಟಡ ಇಲ್ಲದಿರುವುದರಿಂದ ಪ್ರತಿವರ್ಷ 65–70 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗುತ್ತಿದೆ. ವಿದ್ಯಾರ್ಥಿಗಳು ಅಗತ್ಯ ಸೌಲಭ್ಯಗಳಿಲ್ಲದೇ ಕಾಲ ಕಳೆಯುವಂತಾಗಿದೆ. ಪಟ್ಟಣದಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಬಿಸಿಎಂ ಇಲಾಖೆಯ 3 ಹಾಸ್ಟೇಲ್‌ಗಳು ಹಲವು ವರ್ಷದಿಂದ ಖಾಸಗಿ ಕಟ್ಟಡದಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯ ನಡುವೆಯೇ ವರ್ಷ ಕಳೆಯುತ್ತಿವೆ.

ಕಟ್ಟಡ ಕಾಮಗಾರಿ ಪೂರ್ಣಗೊಳಿಸಿ ಹಸ್ತಾಂತರಿಸಿದರೆ ಬರುವ ಶೈಕ್ಷಣಿಕ ವರ್ಷಕ್ಕಾದರೂ 100 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಬಹುದು. ಆದ್ದರಿಂದ ಕಟ್ಟಡ ಕಾಮಗಾರಿ ಬೇಗ ಮುಗಿಸುವಂತೆ ಸಂಬಂಧಪಟ್ಟ ಗುತ್ತಿಗೆದಾರ ಸಂಸ್ಥೆಗೆ ಹಿರಿಯ ಅಧಿಕಾರಿಗಳು, ಶಾಸಕರು ಸೂಚಿಸಿದ್ದಾರೆ. ಗುತ್ತಿಗೆದಾರರು ಹೆಚ್ಚುವರಿ ಅನುದಾನಕ್ಕೆ ಬೇಡಿಕೆ ಸಲ್ಲಿಸಿದ್ದು, ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸುತ್ತೇವೆ ಎಂದಿದ್ದಾರೆ.

**– ಎಸ್.ಬಿ ಕುಲಕರ್ಣಿ.**
ಸಮಾಜ ಕಲ್ಯಾಣ ಇಲಾಖೆಯ ಸಹಾಯ ನಿರ್ದೇಶಕರು.

# ನಿರಂತರ ಶ್ರಮವಹಿಸಿ ಪಕ್ಷದ ಬಲ ಹೆಚ್ಚಿಸೋಣ



**■ವಿಜಯಸಾಕ್ಷಿ ಸುದ್ದಿ, ಗದಗ**

ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ಹಾವೇರಿ–ಗದಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಗದಗ ಜಿಲ್ಲೆಯ ನೂತನ ಜಿಲ್ಲಾಧ್ಯಕ್ಷ ರಾಜು ಕುರಡಗಿ ಅವರನ್ನು ಪಕ್ಷದ ಜಿಲ್ಲಾ ಕಛೇರಿಯಲ್ಲಿ ಹಾವೇರಿ–ಗದಗ ಲೋಕಸಭಾ ಕ್ಷೇತ್ರದ ಆಕಾಂಕ್ಷಿ ಮಂಜುನಾಥ ಮಡಿವಾಳರ ಅವರು ಭೇಟಿ ನೀಡಿ, ಗೌರವಿಸಿ ಸನ್ಮಾನಿಸಿದರು.

ಬಿಜೆಪಿ ಪಕ್ಷ ಹಾವೇರಿ–ಗದಗ ಲೋಕಸಭಾ ಕ್ಷೇತ್ರದಲ್ಲಿ ಜಯಗಳಿಸುವ ಮೂಲಕ ನರೇಂದ್ರ ಮೋದಿಯವರು ಮತ್ತೊಮ್ಮೆ ಗೆಲುವು ಸಾಧಿಸಲು ನಾವೆಲ್ಲರೂ ನಿರಂತರವಾಗಿ ಶ್ರಮವಹಿಸಬೇಕಿದೆ. ಈ ಲೋಕಸಭಾ ಕ್ಷೇತ್ರದ ಬಿಜೆಪಿಯ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದು, ತಮ್ಮೆಲ್ಲರ ಆಶೀರ್ವಾದ, ಸಲಹೆ–ಸೂಚನೆಗಳು ಅಗತ್ಯವಾಗಿದೆ. ಕ್ರಿಯಾಶೀಲರಾಗಿರುವ ನಿಮ್ಮನ್ನು ಪಕ್ಷ ಗುರುತಿಸಿ ಜಿಲ್ಲಾಧ್ಯಕ್ಷ ಸ್ಥಾನದ ಜವಾಬ್ದಾರಿ ನೀಡಿದ್ದು ಪಕ್ಷಕ್ಕೆ ಇನ್ನೂ ಹೆಚ್ಚು ಶಕ್ತಿ ಬಂದಂತಾಗಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಅಂಬರೀಶ ಹೊಸಮನಿ, ಬಸವರಾಜ್ ಗುಡ್ಡದ, ಬೂದಪ್ಪ ಹಳ್ಳಿ, ಫಕ್ಕಿ–ರೆಡ್ಡಿ ಅತ್ತಿಗೇರಿ, ಮಂಜುನಾಥ ತಾಂಡೂರ, ನಾಗರಾಜ್ ಮತ್ತೂರ, ಚನ್ನಬಸಪ್ಪ ಹುರುಳಿ, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಭೀಮಸೇನ ಜೋಷಿ ಸಂಗೀತ ಮಾಂತ್ರಿಕರು



■ವಿಜಯಸಾಕ್ಷಿ ಸುದ್ದಿ, ಗದಗ

ಹಿಂದೂಸ್ತಾನಿ ಸಂಗೀತದ ಕಿರಾಣಾ ಘರಾಣದಲ್ಲಿ ಪರಿಣಿತರಾದ ಪಂ. ಭೀಮಸೇನ ಜೋಷಿ ಅವರು ಸಂಗೀತ ಮಾಂತ್ರಿಕರು. ಭಾರತ ರತ್ನ ಪ್ರಶಸ್ತಿ ಪುರಸ್ಕೃತ ಭೀಮಸೇನ ಜೋಷಿ ಅವರು ನಮ್ಮ ಗದುಗಿನವರು ಎಂಬ ಹೆಮ್ಮೆ ನಮಗಿದೆ. ಅವರು ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ದಿಗ್ಗಜರಾಗಿದ್ದಾರೆ ಎಂದು ಗದುಗಿನ ಕೀರ್ತನಕಾರ, ಕುಮಾರವ್ಯಾಸ ಪ್ರಶಸ್ತಿ ವಿಜೇತ ಸಿದ್ದೇಶ್ವರ ಶಾಸ್ತ್ರಿ ತೆಲ್ಲೂರ ಹೇಳಿದರು.

ಅವರು ಸೋಮವಾರ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಕರ್ನಾಟಕ ರಾಜ್ಯ ಲೇಖಕಿಯರ ಸಂಘ ಗದಗ ಜಿಲ್ಲಾ ಘಟಕ ಹಾಗೂ ಅಕ್ಕ ಮಹಾದೇವಿ ಕದಳಿಶ್ರೀ ವೇದಿಕೆಯಿಂದ ನಡೆದ 'ಪಂ.ಭೀಮಸೇನ ಜೋಷಿ–ಒಂದು ನೆನಪು' ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಸುಧಾ ಬಂಡಾ ಪ್ರಾಸ್ತಾವಿಕವಾಗಿ ಮಾತನಾಡಿ, ಕಿರಾಣಾ ಘರಾಣದ ಪ್ರಾವೀಣ್ಯತೆ ಪಡೆದ ಜೋಷಿ ಅವರು ಖಯಾಲ್ ಮಾದರಿಯ ಗಾಯನ ಹಾಗೂ ಭಜನಾ ಶೈಲಿಯಲ್ಲಿ ಹೆಚ್ಚು ಪ್ರಖ್ಯಾತರಾದವರು ಎಂದರು.

ಗಾಯಕಿ ದೀಪ್ತಿ ಪಾಠಕ ಹಾಗೂ ಪದ್ಮಾ ಕಬಾಡಿ ಪ್ರಾರ್ಥಿಸಿದರು. ಕವಿತಾ ದಂಡಿನ ಸ್ವಾಗತಿಸಿದರು. ಸುವರ್ಣಾ ವಸ್ತ್ರದ ಪರಿಚಯಿಸಿದರು. ಮಹಾಲಕ್ಷ್ಮೀ ತೊಂಡಿಹಾಳಿ ನಿರೂಪಿಸಿದರು. ಕೊನೆಗೆ ಶಶಿಕಲಾ ಲಕ್ಕನಗೌಡ್ರ ವಂದಿಸಿದರು.

ಎರಡೂ ವೇದಿಕೆಗಳಿಂದ ಸಿದ್ದೇಶ್ವರ ಶಾಸ್ತ್ರಿ ತೆಲ್ಲೂರ ಅವರನ್ನು ಸುಮಾ ಪಾಟೀಲ, ಜ್ಯೋತಿ ಭರಮಗೌಡ್ರ, ಕಾವ್ಯಾ ದಂಡಿನ, ಅನುಸೂಯಾ ಪಾಟೀಲ, ಜಯಶ್ರೀ ಶ್ರೀಗಿರಿ, ಜಯಶ್ರೀ ಪಾಟೀಲ, ರತ್ನಾ ಗುಂಟೂರ ಮುಂತಾದವರು ಸನ್ಮಾನಿಸಿದರು.

### ಹಂಪಸಾಗರದ ಜಾತ್ರಾ ಮಹೋತ್ಸವಕ್ಕೆ ರುದ್ರಮುನಿ ಶ್ರೀಗಳಿಂದ ಆಮಂತ್ರಣ

# ಮಹಾದೇವ ತಾತನವರ ಜಾತ್ರಾ ಮಹೋತ್ಸವ

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಜಗತ್ತಿನಲ್ಲಿ ಎಲ್ಲ ವಿಷಯಗಳಲ್ಲಿ ಭಕ್ತಿಯೇ ದೊಡ್ಡದು. ಭಕ್ತರ ಭಕ್ತಿ ಭಗವಂತನನ್ನೂ ಸಹ ಕಟ್ಟಿ ಹಾಕುತ್ತದೆ ಎನ್ನುವುದಕ್ಕೆ ಇತಿಹಾಸದಲ್ಲಿ ನಮಗೆ ಅನೇಕ ಉದಾಹರಣೆಗಳು ದೊರಕುತ್ತವೆ. ಅದರಲ್ಲಿಯೂ ನರೇಗಲ್ಲ ಭಕ್ತರ ಪ್ರೀತಿ, ಭಕ್ತಿಯನ್ನು ಅಳೆಯಲು ಸಾಧ್ಯವಿಲ್ಲ ಎಂದು ಹಂಪಸಾಗರದ ನವಲಿ ಕಟ್ಟಿಹಿರೇಮಠದ ಷ.ಬ್ರ. ಶ್ರೀ ರುದ್ರಮುನಿ ಶಿವಲಿಂಗ ಶಿವಾಚಾರ್ಯರು ಹೇಳಿದರು.



ನರೇಗಲ್ಲ ಪಟ್ಟಣದಲ್ಲಿನ ಶಾಖಾ ಮಠದಲ್ಲಿ ಮಂಗಳವಾರ ಬೆಳಿಗ್ಗೆ ಅವರು ನರೇಗಲ್ಲದ ಭಕ್ತರನ್ನು ಮತ್ತು ಮಜಿರೆ ಗ್ರಾಮಗಳ ಭಕ್ತರನ್ನು ಹಂಪಸಾಗರದ ಜಾತ್ರಾ ಮಹೋತ್ಸವಕ್ಕೆ ಆಮಂತ್ರಿಸಿ ಆಶೀರ್ವಚನ ನೀಡಿದರು.

ಇದೇ ಫೆಬ್ರುವರಿ 16ರಂದು ಹಂಪಸಾಗರದಲ್ಲಿ ಮಹಾದೇವ ತಾತನವರ 67ನೇ ವರ್ಷದ ಜಾತ್ರಾ ಮಹೋತ್ಸವ ಮತ್ತು ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗಲಿದ್ದು, ಈ ಜಾತ್ರಾ ಮಹೋತ್ಸವಕ್ಕೆ ನಿಮ್ಮೆಲ್ಲರನ್ನೂ ಆಮಂತ್ರಿಸಲು ನಾನಿಲ್ಲಿಗೆ ಬಂದಿದ್ದೇನೆ ಎಂದು ಶ್ರೀಗಳು ತಿಳಿಸಿ, ನರೇಗಲ್ಲ ಮತ್ತು ಮಜಿರೆ ಗ್ರಾಮಗಳ ಎಲ್ಲ ಭಕ್ತರೂ ಈ ಮಹಾ ರಥೋತ್ಸವದಲ್ಲಿ ಪಾಲ್ಗೊಂಡು ತಾತನವರ ಕೃಪೆಗೆ ಪಾತ್ರರಾಗಬೇಕೆಂದು ತಿಳಿಸಿದರು.

ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಮಾತನಾಡಿ, ಮಹಾದೇವ ತಾತನವರ ಚರಿತ್ರೆ ಓದಿದರೆ ತಾತನವರು ಅದೆಂತಹ ಸಾಧಕರಾಗಿದ್ದರು ಎಂಬುದು ತಿಳಿದುಬರುತ್ತದೆ. ಅವರ ಸಾಧನೆ ನಮ್ಮನ್ನು ಮೂಕ ವಿಸ್ಮಿತರನ್ನಾಗಿ ಮಾಡುತ್ತದೆ. ಅಂತಹ ಮಹಾಮಹಿಮರು ಹಂಪಸಾಗರದಲ್ಲಿ ನೆಲೆನಿಂತು ಭಕ್ತರನ್ನು ಉದ್ಧರಿಸುತ್ತಿರುವುದು ಮತ್ತು ಈಗ ಆ ಕಾರ್ಯವನ್ನು ಷ.ಬ್ರ. ಶ್ರೀ ರುದ್ರಮುನಿ ಶಿವಲಿಂಗ ಶಿವಾಚಾರ್ಯರು ಮುಂದುವರೆಸಿಕೊಂಡು ಹೋಗುತ್ತಿರುವುದು ಅತ್ಯಂತ ವಿಶೇಷವಾಗಿದೆ. ಆದ್ದರಿಂದ ಎಲ್ಲರೂ ತಾತನವರ ಜಾತ್ರೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸೋಣ ಎಂದರು.

ಸಭೆಯನ್ನುದ್ದೇಶಿಸಿ ನಿವೃತ್ತ ಸೈನಿಕ ಶಿವಪುತ್ರಪ್ಪ ಸಂಗನಾಳ, ಮಲ್ಲನಗೌಡರ, ಎಸ್.ಎಚ್. ಭಜಂತ್ರಿ ಮಾತನಾಡಿದರು. ಸಭೆಯಲ್ಲಿ ಮಹಾದೇವಸ್ವಾಮಿಗಳು, ಡ.ಸ. ಹಡಗಲಿಯ ಶ್ರೀಗಳು, ಪ.ಪಂ. ಮಾಜಿ ಅಧ್ಯಕ್ಷ ಕಲ್ಮೇಶ ತೊಂಡಿಹಾಳ, ಶರಣಪ್ಪ ಕಲಾಲಬಂಡಿ, ವೀರಣ್ಣ ಗುಜಮಾಗಡಿ, ವಿಶ್ವಚೇತನ ಪ್ರೌಢಶಾಲೆಯ ಬಳಗ, ದೇವಪ್ಪ ಹಕ್ಕಿಸ ಮೈಲಾರಪ್ಪ ಗೋಡಿ, ಗಂಗಾಧರ ಮಡಿವಾಳರ, ಭಾಷಾಸಾಬ ನದಾಫ್, ಮಂಜುನಾಥ ಪಾಯಪ್ಪಗೌಡ್ರ, ರುದ್ರಪ್ಪ ಬೆಳಗಗಲ್ಲ, ಶರಣಪ್ಪ ಮಾರನಬಸರಿ, ನವನಗರದ ಎಲ್ಲ ಪದಾಧಿಕಾರಿಗಳು, ಸದ್ಭಕ್ತರು ಉಪಸ್ಥಿತರಿದ್ದರು. ಮುತ್ತಣ್ಣ ಹಡಪದ ನಿರೂಪಿಸಿ, ವಂದಿಸಿದರು.

> ಫೆಬ್ರುವರಿ 10ರಿಂದ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ಪ್ರತಿ ದಿನ ಸಾಯಂಕಾಲ 7ಕ್ಕೆ ವೇ.ಮೂ. ಕೇದಾರಸ್ವಾಮಿಗಳು ಹಗರಿಬೊಮ್ಮನಹಳ್ಳಿ ಇವರಿಂದ ಆಧಾತ್ಮಿಕ ಪ್ರವಚನ ಪ್ರಾರಂಭವಾಗುತ್ತದೆ. ಫೆ. 14ರಂದು ಬೆಳಿಗ್ಗೆ ತೇರಿನ ಕಳಸಾರೋಹಣ, ಫೆ. 15ರಂದು ಬೆಳಿಗ್ಗೆ ಜಂಗಮಾರಾಧನೆ, ಫೆ. 16ರಂದು ಮಹಾರಥೋತ್ಸವವು ವಿಜೃಂಭಣೆಯಿಂದ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಜರುಗಲಿದ್ದು, ಈ ಎಲ್ಲ ಕಾರ್ಯಗಳಲ್ಲಿ ಭಕ್ತಾದಿಗಳು ಪಾಲ್ಗೊಳ್ಳಬೇಕೆಂದು ಶ್ರೀಗಳು ಸಕಲ ಭಕ್ತರನ್ನು ಜಾತ್ರೆಗೆ ಆಹ್ವಾನಿಸಿದರು.

### ಇಂಗ್ಲಿಷ್ ವಿಷಯದ ಪ್ರಶ್ನೆ ಪತ್ರಿಕೆ ಬಿಡಿಸುವ ಕಾರ್ಯಾಗಾರ

# ಆಂಗ್ಲ ಭಾಷೆಯ ಮಹತ್ವ ಅರಿಯಿರಿ

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಜಗತ್ತಿನಾದ್ಯಾಂತ ಇಂಗ್ಲಿಷ್ ಭಾಷೆಯು ಸಂಪರ್ಕ ಭಾಷೆಯಾಗಿ ಬಳಕೆಯಾಗುತ್ತಿರುವದರಿಂದ ಪ್ರಸ್ತುತ ಸಮಯದಲ್ಲಿ ಅತ್ಯಂತ ಮಹತ್ವದ ಭಾಷೆಯಾಗಿದೆ. ಇಂಗ್ಲಿಷ್ ಭಾಷೆಯ ಜ್ಞಾನವನ್ನು ಪಡೆದುಕೊಂಡು ಅತ್ಯುತ್ತಮವಾದ ಜೀವನ ರೂಪಿಸಿಕೊಳ್ಳಬೇಕೆಂದು ಗದಗ ಜಿಲ್ಲೆ ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆಯ ಉಪನಿರ್ದೇಶಕ ಜಿ.ಎನ್. ಕುರ್ತಕೋಟಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಇಲ್ಲಿಯ ಬಿ.ಎಚ್. ಪಾಟೀಲ ಪ.ಪೂ ಕಾಲೇಜಿನಲ್ಲಿ ಗದಗ ಜಿಲ್ಲೆಯ ಪದವಿಪೂರ್ವ ಆಂಗ್ಲ ಉಪನ್ಯಾಸಕರ ವೇದಿಕೆ ಹಾಗೂ ಬಿ.ಎಚ್. ಪಾಟೀಲ ಪ.ಪೂ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ವಿಷಯದ ಪ್ರಶ್ನೆ ಪತ್ರಿಕೆ ಬಿಡಿಸುವ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂಗ್ಲೀಷ್ ಭಾಷೆಯು ಕನ್ನಡಕ್ಕಿಂತಲೂ ಸರಳವಾಗಿದ್ದು, ದೈನಂದಿನ ಜೀವನದಲ್ಲಿ ಇಂಗ್ಲೀಷ್ ಭಾಷೆಯನ್ನು ಬಳಸುವ ಮೂಲಕ ಭಾಷೆಯನ್ನು ಕರಗತ ಮಾಡಿಕೊಳ್ಳಬೇಕು.

ವಾರ್ಷಿಕ ಪರೀಕ್ಷೆಗಳು ಸಮೀಪಿಸುತ್ತಿದ್ದು, ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಗಮನ ಹರಿಸಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಆಂಗ್ಲ ಉಪನ್ಯಾಸಕರ ವೇದಿಕೆಯ ಕಾರ್ಯದರ್ಶಿ ರಮಾಕಾಂತ ದೊಡ್ಡಮನಿ ಮಾತನಾಡಿ, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳಿಗಾಗಿ ರೂಪಿಸುವ ಆಕರ್ಷಣೀಯ ಕಾರ್ಯಕ್ರಮಗಳಿಂದಾಗಿ ಆಂಗ್ಲ ಉಪನ್ಯಾಸಕರ ವೇದಿಕೆಯು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಜಿಲ್ಲಾದ್ಯಾಂತ ಪ್ರಶ್ನೆ ಪತ್ರಿಕೆ ಬಿಡಿಸುವ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿದ್ದು, ದ್ವಿತೀಯ ಪಿಯುಸಿ ವಾರ್ಷಿಕ ಫಲಿತಾಂಶವನ್ನು ಹೆಚ್ಚಿಸಲು ಕಾರ್ಯಾಗಾರಗಳು ಪರಿಣಾಮ ಕಾರಿಯಾಗಿವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಲಕ್ಕುಂಡಿಯ ಜೆ.ವಿ.ವಿ. ಸಂಸ್ಥೆಯ ಅಧ್ಯಕ್ಷ ಆಯ್.ಎನ್. ಕುಂಬಾರ, ವೇದಿಕೆಯ ಅಧ್ಯಕ್ಷ ಪ್ರಾ. ಬಿ.ಜಿ. ಗಿರಿತಮ್ಮಣ್ಣವರ ಮಾತನಾಡಿದರು. ಜನತಾ ವಿದ್ಯಾವರ್ಧಕ ಸಂಸ್ಥೆಯ ಪಿ.ಎಫ್. ತೋಫಿನ, ವೀರಯ್ಯ ಗಂಧದ ಹಾಗೂ ಶಾಂತಕುಮಾರ ಮಲ್ಲಾಪೂರ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಉಪನ್ಯಾಸಕರಾದ ಶಶಿಧರ ಕುರಿ, ಸುರೇಶ ಸಣ್ಣೇಲಿ ಹಾಗೂ ಶ್ರೀನಿವಾಸ ಬಡಿಗೇರ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಪ್ರಾಚಾರ್ಯ ಬಿ.ವ್ಹಿ. ಪಾಟೀಲ ಸ್ವಾಗತಿಸಿದರು. ಆರ್.ಎಸ್. ಚವಡಿ ನಿರೂಪಿಸಿದರು. ವಿನೋದ ತಳಗಡೆ ವಂದಿಸಿದರು.

# ಸತತ ಅಧ್ಯಯನವೇ ಪ್ರಗತಿಗೆ ದಾರಿದೀಪ



■ವಿಜಯಸಾಕ್ಷಿ ಸುದ್ದಿ, ಕುಕನೂರು

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಬ್ಬರೂ ಸತತ ಅಧ್ಯಯನದ ಮೂಲಕ ತಮ್ಮಲ್ಲಿ ಆತ್ಮ ಸ್ಥೈರ್ಯ ಹೆಚ್ಚಿಸಿಕೊಳ್ಳಬೇಕೆಂದು ಬೇವೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ಶೇಖಬಾಬು ಶಿವಪುರ ಹೇಳಿದರು.

ಇಲ್ಲಿಯ ವಿದ್ಯಾನಂದ ಗುರುಕುಲ ಪ.ಪೂ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ತಮ್ಮಲ್ಲಿ ರಾಷ್ಟ್ರಪ್ರೇಮ ಬೆಳೆಸಿಕೊಳ್ಳಬೇಕು. ಹೆತ್ತ ತಂದೆ–ತಾಯಿಗಳು, ವಿದ್ಯೆ ನೀಡಿದ ಗುರುಗಳನ್ನು, ಸಹಾಯ ಮಾಡಿದ ಪ್ರತಿಯೊಬ್ಬರನ್ನೂ ಜ್ಞಾಪಿಸಿಕೊಂಡು ಮುಂದೆ ಸಾಗಿದರೆ ತಮ್ಮ ಭವಿಷ್ಯ ಉಜ್ವಲಗೊಳ್ಳವುದಲ್ಲದೇ, ಭವಿಷ್ಯದಲ್ಲಿ ಈ ನಾಡಿನ ಸತ್ಪ್ರಜೆಯಾಗಿ ಹೊರಹೊಮ್ಮಬಹುದು ಎಂದು ಆಶಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಶರಣಪ್ಪ ಹೊಸಮನಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಜನ್ಮ ತಾಳಿದ ವಿದ್ಯಾನಂದ ಗುರುಕುಲ ಶಿಕ್ಷಣ ಸಂಸ್ಥೆ 100 ವಸಂತಗಳನ್ನು ಕಂಡಿದೆ. ಇಲ್ಲಿ ವ್ಯಾಸಂಗ ಮಾಡಿದ ಲಕ್ಷಾಂತರ ವಿದ್ಯಾರ್ಥಿಗಳೇ ಸಂಸ್ಥೆಯ ಆಸ್ತಿ ಎಂದರು.

ಡಾ. ಜಿ.ಎಸ್. ಮೇಲ್ಕೋಟೆ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕ ಗುರುರಾಜ್ ದೇಸಾಯಿ ಮಾತನಾಡಿದರು. ಪ್ರಾಚಾರ್ಯ ಎನ್.ಪಾಂಡುರಂಗ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಜಿ.ವಿ. ಜಹಗೀರದಾರ, ಡಾ. ಜಿ.ಎಸ್. ಮೇಲ್ಕೋಟೆ ಪಾಲಿಟೆಕ್ನಿಕ್ ಕಾಲೇಜಿನ ಹಿರಿಯ ಉಪನ್ಯಾಸಕ ಶೇಖ್‌ಮೆಹಬೂಬ, ಇಟಗಿ ಕಾಲೇಜಿನ ಉಪನ್ಯಾಸಕ ಗಂಗಾಧರ ಅವಟೇರ, ಹಿರಿಯ ಉಪನ್ಯಾಸಕರಾದ ನಜೀರ್‌ಅಹ್ಮದ್ ತಳಕಲ್, ಐ.ಟಿ. ಬಡಿಗೇರ, ಶ್ರೀನಿವಾಸ ದೇಸಾಯಿ, ಸುರೇಶ ಹಳ್ಳಿಗುಡಿ, ರಾಮಣ್ಣ ಎಸ್. ಹನುಮಂತರಾವ್, ಸುಭಾಷ ಭಜಂತ್ರಿ, ಕೆ.ಹರಿಪ್ರಿಯಾ, ಬಸಮ್ಮ ಹಾಳಕೇರಿ, ವೀರಮ್ಮ ಇಟಗಿ ಮತ್ತಿತರರು ವೇದಿಕೆಯಲ್ಲಿದ್ದರು. ಉಪನ್ಯಾಸಕ ಆರ್.ಕೆ. ಪಾಟೀಲ ಸ್ವಾಗತಿಸಿದರು. ಬಸವರಾಜ ಬಿಂಗಿ ನಿರೂಪಿಸಿದರು.

# ಮನೋರಮಾ ಕಾಲೇಜಿನಲ್ಲಿ ವಾರ್ಷಿಕ ಸ್ನೇಹ ಸಮ್ಮೇಳನ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಮನೋರಮಾ ಸ್ವತಂತ್ರ ಪದವಿಪೂರ್ವ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಇತ್ತೀಚೆಗೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಸಂಸ್ಥೆಯ ಚೇರಮನ್ ಎನ್.ಎಮ್. ಕುಡತರಕರ ವಹಿಸಿದ್ದರು.

ಸಾಹಿತಿ ಪ್ರೊ. ಎಸ್.ಯು. ಸಜ್ಜನಶೆಟ್ಟರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಸತತ ಅಧ್ಯಯನದಿಂದ ಉತ್ತಮ ಸಾಧಕರಾಗಬಹುದು. ಉತ್ತಮ ಅಂಕ ಗಳಿಸಬೇಕಾದರೆ ಮೊಬೈಲ್ ಗೀಳಿನಿಂದ ದೂರವಿದ್ದು, ಪುಸ್ತಕಕ್ಕೆ ಹತ್ತಿರವಾಗಿರಿ ಎಂದರು.

ಪ್ರಾಚಾರ್ಯ ಬಿ.ಎಸ್. ಹಿರೇಮಠ ಮಾತನಾಡಿ, ವಿದ್ಯಾರ್ಥಿಗಳು ಆತ್ಮಸ್ಥೈರ್ಯದಿಂದ ಉಪನ್ಯಾಸಕರು ಹೇಳಿದ ಪಾಠಗಳನ್ನು ಸರಿಯಾಗಿ ಓದಿಕೊಂಡು ಹಬ್ಬದ ರೀತಿಯಲ್ಲಿ ಪರೀಕ್ಷೆಗಳನ್ನು ಬರೆದು, ಕಲಿತ ಸಂಸ್ಥೆಗೆ ಹಾಗೂ ತಂದೆ–ತಾಯಿಗಳಿಗೆ ಕೀರ್ತಿ ತರಬೇಕೆಂದರು.

ಆಡಳಿತಾಧಿಕಾರಿ ಕಿಶೋರ ಮುದಗಲ್ಲ ಮಾತನಾಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯ ಕುಡತರಕರ, ಚೇತನ ಕುಡತರಕರ, ಪಿಯುಸಿ ಸಂಯೋಜಕಿ ಪ್ರೊ. ಶಾಹಿದಾ ಶಿರಹಟ್ಟಿ, ಪದವಿ ಸಂಯೋಜಕರಾದ ಪ್ರೊ. ಸವಿತಾ ಪೂಜಾರ, ಪ್ರೊ. ಅಲ್ವಿನಾ ಡಿ., ಪ್ರೊ. ಚೈತ್ರಾ ದಲಬಂಜನ, ಪ್ರೊ. ರಾಘವೇಂದ್ರ ನವಲಗುಂದ, ಪ್ರೊ. ರಶ್ಮಿ, ಪ್ರೊ. ಸುಜಾತಾ ಇಂಡಿ, ಪ್ರೊ. ಶಿರಹಟ್ಟಿ,ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ಸ್ನೇಹಾ ಕಲ್ಲೂರ, ಶಹತಾಜ ಖಾಜಿ ನಿರೂಪಿಸಿದರು.

### 2024ರ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ

# ಅಧ್ಯಕ್ಷರಾಗಿ ಜಗದೀಶ್ ಎಸ್.ಪಿ ಆಯ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವವನ್ನು ಕಳೆದ 8 ವರ್ಷಗಳಿಂದ ಅದ್ದೂರಿಯಾಗಿ ಆಚರಿಸಿಕೊಂಡು ಬರಲಾಗುತ್ತಿದ್ದು, ಪ್ರತಿ ವರ್ಷ ಓರ್ವ ಅಧ್ಯಕ್ಷರನ್ನು ಆಯ್ಕೆ ಮಾಡಲಾಗುತ್ತದೆ. 2024ರ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವದ ಅಧ್ಯಕ್ಷರಾಗಿ ಉದ್ಯಮಿ ಜಗದೀಶ ಎಸ್.ಪಿ ಅವರನ್ನು ಅಧಿಕೃತವಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಶ್ರೀರಾಮ ಸೇನೆ ರಾಜ್ಯ ಕಾರ್ಯದರ್ಶಿ ರಾಜು ಖಾನಪ್ಪನವರ ಮಾಹಿತಿ ನೀಡಿದರು.

ನಗರದ ಒಕ್ಕಲಗೇರಿ ಓಣಿಯ ರಾಚೋಟೇಶ್ವರ ದೇವಸ್ಥಾನದಲ್ಲಿ 2024ರ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವದ ಪೂರ್ವಭಾವಿ ಸಭೆಯಲ್ಲಿ ಸರ್ವಾನುಮತದಿಂದ ಈ ಆಯ್ಕೆ ನಡೆಯಿತು.



ಈ ಸಂದರ್ಭದಲ್ಲಿ ಮಾತನಾಡಿದ ರಾಜು ಖಾನಪ್ಪನವರ, ಈ ವರ್ಷವೂ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಕಾರ್ಯಕ್ರಮ ಆಯೋಜಿಸಿದ್ದು, ಗ್ರಾಮೀಣ ಭಾಗದವರಿಗೆ 'ಚಿತ್ರದಲ್ಲಿ ಛತ್ರಪತಿ ಶಿವಾಜಿ' ಎನ್ನುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಮಹಿಳೆಯರಿಗೆ ರಂಗೋಲಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಚಿತ್ರ ಬಿಡಿಸುವ ಸ್ಪರ್ಧೆಯನ್ನು ಆಯೋಜಿಸಿದ್ದೇವೆ ಎಂದರು.

ಉತ್ಸವದ ಅಧ್ಯಕ್ಷರಾಗಿ ಆಯ್ಕೆಯಾದ ಜಗದೀಶ ಎಸ್.ಪಿ ಮಾತನಾಡಿ, ನನಗೆ ನೀಡಿದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತೇನೆ. ನನಗೆ ಅವಕಾಶ ಮಾಡಿಕೊಟ್ಟ ಎಲ್ಲ ಹಿಂದೂಪರ ಸಂಘಟನೆಗಳಿಗೂ ಹಾಗೂ ಶಿವಾಜಿ ಮಹಾರಾಜರ ಭಕ್ತರಿಗೂ ನಮನಗಳನ್ನು ಸಲ್ಲಿಸುತ್ತೇನೆ ಎಂದರು.


**ಶಿವಾಜಿ ಮಹಾರಾಜರ ಜಯಂತ್ಯುತ್ಸವ ಕಮಿಟಿ**

ಗೌರವಧ್ಯಕ್ಷ–ರಾಜು ಮುಧೋಳ, ಅಧ್ಯಕ್ಷ–ಜಗದೀಶ್ ಎಸ್.ಪಿ, ಉಪಾಧ್ಯಕ್ಷರು–ಅನಿಲ್ ಅಬ್ಬಿಗೇರಿ, ಮಲ್ಲಣ್ಣ ಚಿಂಚಲಿ, ಪ್ರಧಾನ ಕಾರ್ಯದರ್ಶಿ–ವಿರುಪಾಕ್ಷಪ್ಪ ಹೆಬ್ಬಳ್ಳಿ, ಮಹಾಂತೇಶ್ ನೆಲೋಡಿ, ಸಹ ಕಾರ್ಯದರ್ಶಿ– ಕಿಶನ್ ಮೇರವಾಡೆ, ಸಿದ್ದು ಜೀವನಗೌಡ್ರ, ಸಂಘಟನಾ ಕಾರ್ಯದರ್ಶಿ–ಮನೋಜ್ ಆಲೂರ್, ರಾಜು ಗದ್ದಿ, ಖಜಾಂಚಿ–ಸುನೀಲ ಕಬಾಡಿ, ರವಿ ಕರಬಸಣ್ಣವರ್, ಪ್ರಚಾರಕರು–ವಿಶ್ವನಾಥ್ ಸಿರಿ, ಬಸವರಾಜ್ ಹುಬ್ಬಳ್ಳಿ, ಪ್ರಶಾಂತ್ ಬೆಟಗೇರಿ, ಸಂತೋಷ್ ಪೂಜಾರ್, ಸತ್ಯಪ್ಪಗೌಡ ಪಾಟೀಲ್, ಅಪ್ಪು ದುಂಡಸಿ, ಪಂಚಾಕ್ಷರಿ ವೀರಶೆಟ್ಟರ, ಮಾರ್ಗದರ್ಶಕರು–ಸಹದೇವ್ ಗಣಾಚಾರಿ, ಅಜ್ಜಣ್ಣ ಮಲ್ಲಾಡದ, ಮುರುಗಪ್ಪ ಕರಗಲ್, ವಿಠ್ಠಲ್ ಬಾಂಡಗೆ, ಫಕೀರಸಾ ಬಾಂಡಗೆ, ವಿನಾಯಕ್ ಮಾನ್ವಿ, ರಾಜು ಮಲ್ಲಾಡದ, ಮಂಜುನಾಥ್ ಬೆಲೇರಿ ಇವರನ್ನು ಆಯ್ಕೆ ಮಾಡಲಾಯಿತು.

## ನಿಧನ ವಾರ್ತೆ

### ವೇ.ಮೂ. ಶಿವಬಸಯ್ಯ ಸಂಗನಬಸಯ್ಯ ಹಿರೇಮಠ

ನರೇಗಲ್ಲ: ಸಮೀಪದ ಜಕ್ಕಲಿ ಗ್ರಾಮದ ನಿವಾಸಿ ವೇ.ಮೂ. ಶಿವಬಸಯ್ಯ ಸಂಗನಬಸಯ್ಯ ಹಿರೇಮಠ (94) ರವಿವಾರ ಲಿಂಗೈಕ್ಯರಾದರು.



ಮೃತರಿಗೆ ಪತ್ನಿ, ಎಂಟು ಜನ ಪುತ್ರಿಯರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗದವರು ಇದ್ದಾರೆ.

# ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಿ

▸▸ಮೊದಲನೇ ಪುಟದಿಂದ

ಈ ಹಿನ್ನೆಲೆಯಲ್ಲಿ ನಮ್ಮ ನೆರೆ–ಹೊರೆಯ ರಾಷ್ಟ್ರಗಳಾಗಿರುವುದರಿಂದ ವಲಸೆಯಿಂದ ಸಾಂಕ್ರಾಮಿಕವಾಗಿ ಹರಡುವ ಸಾಧ್ಯತೆಯಿದ್ದು, ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮವನ್ನು ಒಂದೇ ಸುತ್ತಿನಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಹಾಗೂ ಎ.ಎಫ್.ಪಿ. ಸರ್ವೇಕ್ಷಣೆ ಕಾರ್ಯಕ್ರಮಗಳನ್ನು ಅತ್ಯಂತ ಜಾಗರೂಕತೆಯಿಂದ ಮತ್ತು ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್.ಎಸ್. ನೀಲಗುಂದ, ಆರ್.ಸಿ.ಹೆಚ್.ಓ ಡಾ.ಮೀನಾಕ್ಷಿ ಕೆ.ಎಸ್, ಜಿಲ್ಲೆಯ ಎಲ್ಲಾ ಅನುಷ್ಠಾನಾಧಿಕಾರಿಗಳು, ಸಮುದಾಯ ಔಷಧಿ ಅಧಿಕಾರಿ, ತಾಲೂಕಾ ವೈದ್ಯಾಧಿಕಾರಿಗಳು, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಕಲಾವಿದ ನಿಂಗಪ್ಪರಿಗೆ 'ಕರುನಾಡ ಕಣ್ಮಣಿ' ಪ್ರಶಸ್ತಿ

■ವಿಜಯಸಾಕ್ಷಿ ಸುದ್ದಿ, ಡಂಬಳ

ಇಲ್ಲಿನ ಡೋಣಿ ಗ್ರಾಮದ ಖ್ಯಾತ ಜಾನಪದ ಕಲಾವಿದ ನಿಂಗಪ್ಪ ಎಚ್. ಗುಡ್ಡದ ಅವರಿಗೆ ರಾಯಚೂರು ಜಿಲ್ಲೆಯ 'ಹೆಣ್ಣು ಜಗದ ಕಣ್ಣು' ಸಾಹಿತ್ಯ ವೇದಿಕೆ ಮತ್ತು ಗ್ಲೋಬಲ್ ಗೋರ್ ಬಂಜಾರ ಅರ್ಗನೈಜೇಷನ್ ಹೂವಿನಹಡಗಲಿ ಇವರಿಂದ ಕೊಡಮಾಡುವ 'ಕರುನಾಡ ಕಣ್ಮಣಿ' ರಾಜ್ಯ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.



ಸಾಮಾಜಿಕ ಸೇವೆ, ಕನ್ನಡವನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಇವರು, ಗ್ರಾಮೀಣ ಭಾಗದ ಜಾನಪದ ಕಲೆಯ ದಿಗ್ಗಜರೆಂದೇ ಹೆಸರಾಗಿದ್ದಾರೆ. ಕೋವಿಡ್–19ರ ಸಂಕಷ್ಟದಲ್ಲಿ ಜಾನಪದ ಹಾಡಿನ ಮೂಲಕ ಸುರಕ್ಷತೆಯ ಕುರಿತು, ಕನ್ನಡ ನಾಡು–ನುಡಿಯ ಜನಪದ ಅಸ್ಮಿತೆಯನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ನಿಂಗಪ್ಪ ಗುಡ್ಡದ ಅವರಿಗೆ ಪುರಸ್ಕಾರ ಲಭಿಸಿರುವುದಕ್ಕೆ ಡಂಬಳ ಹೋಬಳಿಯ ಗ್ರಾಮಸ್ಥರು ಮತ್ತು ಡೋಣಿ ಗ್ರಾಮದ ಹಿರಿಯರು ಅಭಿನಂದಿಸಿದ್ದಾರೆ.

# 'ಕರ್ನಾಟಕ ಸಂಭ್ರಮ' ಶಿಬಿರಕ್ಕೆ ವಿಜಯ ಕಿರೇಸೂರ ಆಯ್ಕೆ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು ವತಿಯಿಂದ ಫೆ. 7ರಿಂದ 9ರವರೆಗೆ ರವೀಂದ್ರ ಕಲಾಕ್ಷೇತ್ರದ ಶಿಲ್ಪವನದಲ್ಲಿ ನಡೆಯುವ 'ಕರ್ನಾಟಕ ಸುವರ್ಣ ಸಂಭ್ರಮ ಚಿತ್ರಕಲಾ ಶಿಬಿರ'ಕ್ಕೆ ಗದುಗಿನ ಕಲಾವಿದ ವಿಜಯ ಕಿರೇಸೂರ ಆಯ್ಕೆಯಾಗಿದ್ದಾರೆ.

ನಾಡು-ನುಡಿಯ ಬಗ್ಗೆ, ಕರ್ನಾಟಕದ ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ರಾಜ್ಯಮಟ್ಟದ ಶಿಬಿರ ಇದಾಗಿದ್ದು, ಈ ಚಿತ್ರಕಲಾ ಶಿಬಿರಕ್ಕೆ ಆಯ್ಕೆಯಾದ ರಾಜ್ಯದ ಪ್ರಮುಖ 15 ಕಲಾವಿದರಲ್ಲಿ ವಿಜಯ ಕಿರೇಸೂರ ಸಹ ಒಬ್ಬರು.

ಇವರಿಗೆ ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆಯ ಪದಾಧಿಕಾರಿಗಳು, ಗದಗ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು, ಚಿತ್ರಕಲಾ ಶಿಕ್ಷಕರು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಕಲಾಭಿಮಾನಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ಫೆ. 20ರಂದು ನೇರ ಸಂದರ್ಶನ

■ವಿಜಯಸಾಕ್ಷಿ ಸುದ್ದಿ, ಗದಗ

ಅಂಚೆ ಅಧೀಕ್ಷಕರು ಗದಗ ವಿಭಾಗ ಗದಗ ಅವರು ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ನಿಯುಕ್ತಿಗಾಗಿ ಪ್ರಸ್ತಾಪಿಸಿದ್ದು, ಅರ್ಹ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ಶೈಕ್ಷಣಿಕ ಪ್ರಮಾಣ ಪತ್ರದ ನಕಲುಗಳೊಂದಿಗೆ ಫೆಬ್ರವರಿ 20 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಎಪಿಎಂಸಿ ಯಾರ್ಡ್, ಚೇಂಬರ್ ಆಫ್ ಕಾಮರ್ಸ್ ಎದುರುಗಡೆ ಇರುವ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ನಡೆಯಲಿರುವ ನೇರ ಸಂದರ್ಶನಕ್ಕೆ ಹಾಜರಾಗಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

## ನಗರಸಭಾಧ್ಯಕ್ಷೆ ಉಷಾ ದಾಸರ ಅಧ್ಯಕ್ಷತೆಯಲ್ಲಿ ಸಭೆ । ಆರ್ಥಿಕತೆಗನುಗುಣವಾಗಿ ಯೋಜನೆ

# ಪೂರ್ವಭಾವಿ ಸಭೆಯಲ್ಲಿ ಬೇಡಿಕೆಗಳ ಮಹಾಪೂರ

■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಜನದಟ್ಟಣೆ ಹೆಚ್ಚಿರುವ ಪ್ರದೇಶದಲ್ಲಿ ಮೂತ್ರಾಲಯ ನಿರ್ಮಿಸಿ, ಸುಗಮ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ, ಕುಡಿಯುವ ನೀರು, ಬೀದಿ ದೀಪ ವ್ಯವಸ್ಥೆ ಒದಗಿಸಿ, ನಗರಸಭೆ ಸಂಯುಕ್ತ ಪ.ಪೂ ಕಾಲೇಜು ಅಭಿವೃದ್ಧಿಗೊಳಿಸಿ...ಹೀಗೆ ಹತ್ತು ಹಲವು ಒತ್ತಾಯಗಳು, ಬೇಡಿಕೆಗಳು ನಗರಸಭೆಯಲ್ಲಿ ತೂರಿ ಬಂದವು.

2024-25ನೇ ಸಾಲಿನ ಆಯ-ವ್ಯಯ ಮಂಡಿಸುವ ಮುನ್ನ ನಗರಸಭೆ ಅಧ್ಯಕ್ಷೆ ಉಷಾ ದಾಸರ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ಜರುಗಿದ ಎರಡನೇ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದ ಸಂಘ-ಸಂಸ್ಥೆಗಳ ಮುಖಂಡರು, ಹಿರಿಯರು ವಿವಿಧ ಬೇಡಿಕೆಗಳನ್ನು ಮಂಡಿಸಿದರು.

ಸಭೆ ಆರಂಭವಾಗುತ್ತಿದ್ದಂತೆ ಗದಗ ಜಿಲ್ಲಾ ಸ್ಲಂ ಹೋರಾಟ ಸಮಿತಿಯ ಇಮ್ತಿಯಾಜ್ ಮಾನ್ವಿ, ಅವಳಿ ನಗರದಲ್ಲಿ 48 ಘೋಷಿತ ಹಾಗೂ 30ಕ್ಕೂ ಅಧಿಕ ಅಘೋಷಿತ ಕೊಳಚೆ ಪ್ರದೇಶದ ಅಭಿವೃದ್ಧಿಗೆ ನಗರಸಭೆ ಆಯ-ವ್ಯಯದಲ್ಲಿ ವಿಶೇಷ ಅನುದಾನ ಮೀಸಲಿಡಬೇಕು ಎಂದು ಮನವಿ ಮಾಡಿದರಲ್ಲದೆ, ನಾನೂ ಕಳೆದ ಹಲವು ವರ್ಷಗಳಿಂದ ನಗರಸಭೆ ಆಯ-ವ್ಯಯದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ಆದರೆ, ನಮ್ಮ ಸಲಹೆಗಳಿಗೆ ಆದ್ಯತೆ ಸಿಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಲಿತ ಮುಖಂಡ ಸತೀಶ ಹೂಲಿ, ಅವಳಿ ನಗರದಲ್ಲಿ ಬೀದಿಬದಿ ವ್ಯಾಪಾರಸ್ಥರಿಂದ ಭೂಬಾಡಿಗೆ ಪಡೆಯಲು ಹಿಂದೆಲ್ಲ ಟೆಂಡರ್ ಕರೆದು, ಬೀದಿಬದಿ ವ್ಯಾಪಾರಿಗಳಿಂದ ಸಂಗ್ರಹಿಸಿದ ಹಣದಲ್ಲಿ ನಿಗದಿತ ಪಾಲನ್ನು ನಗರಸಭೆಗೆ ಭರಿಸುತ್ತಿದ್ದರು. ಆದರೆ,



ಇಂದು ಟೆಂಡರ್ ರದ್ದಾಗಿದ್ದರೂ ಬೀದಿಬದಿ ವ್ಯಾಪಾರಸ್ಥರಿಂದ ಹಣ ಸಂಗ್ರಹಿಸುವುದು ಮಾತ್ರ ನಿಂತಿಲ್ಲ. ಹಾಗಾದರೆ ಆ ಹಣ ಎಲ್ಲಿ ಹೋಗುತ್ತದೆ ಎಂಬುದರ ಬಗ್ಗೆ ಗಮನ ಹರಿಸಬೇಕು ಎಂದರು.

ನಗರಸಭೆ ಮಾಲೀಕತ್ವದ ಮಳಿಗೆಗಳ ಬಾಡಿಗೆ ಬಾಕಿ ಇದ್ದು, ಈ ಬಗ್ಗೆ ವಸೂಲಿ ಆಂದೋಲನ ಆರಂಭಿಸಬೇಕು. ಈ ಮೂಲಕ ಬಂದ ಹಣವನ್ನು ಅವಳಿ ನಗರದ ಅಭಿವೃದ್ಧಿಗೆ ಬಳಸುವಂತೆ ಸತೀಶ ಹೂಲಿ ಸಲಹೆ ನೀಡಿದರು.

ಗದಗ ಜಿಲ್ಲಾ ಬ್ರಾಹ್ಮಣ ಸಮಾಜದ ಯುವ ಘಟಕದ ಗದಗ ಜಿಲ್ಲಾಧ್ಯಕ್ಷ ಗಿರೀಶ ಕುಲಕರ್ಣಿ ಮಾತನಾಡಿ, ಬ್ರಾಹ್ಮಣ ಸಮಾಜದ ಸ್ಮಶಾನ ಅಭಿವೃದ್ಧಿ ಹಾಗೂ ಅಲ್ಲಿ ಮೂಲಸೌಕರ್ಯ ಕಲ್ಪಿಸುವಂತೆ ಮನವಿ ಮಾಡಿದರು. ಗದಗ ಜಿಲ್ಲಾ ಆಟೋ ಚಾಲಕ-ಮಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜ ಮನಗುಂಡಿ, ಅವಳಿ ನಗರದಲ್ಲಿ ಇರುವ ಆಟೋ ಸ್ಟ್ಯಾಂಡ್‌ಗಳಿಗೆ ಮೇಲ್ಛಾವಣಿ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ತೋಂಟದಾರ್ಯ ಮಠದ ಜಾತ್ರೆ ವೇಳೆ ರಥಬೀದಿಯ ಎರಡೂ ಬದಿ ತೆರೆಯುವ ತಾತ್ಕಾಲಿಕ ಮಳಿಗೆ ನಿರ್ಮಾಣಕ್ಕೆ ಕೋಟಿಗಟ್ಟಲೆ ಮೊತ್ತದ ಟೆಂಡರ್ ಪಡೆದು, ಆ ಹಣವನ್ನು ಮಠದವರು ಪಡೆಯುತ್ತಿದ್ದಾರೆ. ಅದರ ಬದಲು ನಗರಸಭೆಯವರು ಅದನ್ನು ಟೆಂಡರ್ ಕರೆದು, ಆದಾಯವನ್ನೂ ನಗರಸಭೆಯೇ ಪಡೆಯಬೇಕು ಎಂದು ಸಲಹೆ ನೀಡಿದರು.

ಮಹಿಳಾ ಶೌಚಾಲಯ ನಿರ್ಮಿಸಬೇಕು, ಹೊಸ ಬಸ್ ನಿಲ್ದಾಣ ಬಳಿಯ ಅಂಬೇಡ್ಕರ್ ವೃತ್ತದ ಅಭಿವೃದ್ಧಿಗೆ ಯೋಜನೆ ರೂಪಿಸಬೇಕು, ಪತ್ರಕರ್ತರಿಗೆ ಆರೋಗ್ಯ ಸೌಲಭ್ಯಕ್ಕೆ ಆಯ-ವ್ಯಯದಲ್ಲಿ ಅನುದಾನ ಮೀಸಲಿಡಬೇಕು ಎಂಬ ಮನವಿಗಳು ಕೇಳಿಬಂದವು.

ಉಳಿದಂತೆ, ನಗರಸಭೆಯ ಸಂಯುಕ್ತ ಪ.ಪೂ ಕಾಲೇಜು ಅಭಿವೃದ್ಧಿಯ ಕುರಿತು ಹೆಚ್ಚಿನವರು ಪ್ರಸ್ತಾಪ ಮಾಡಿದರು. ಸಭೆಯಲ್ಲಿ ಅಬ್ದುಲ್‌ರೆಹಮಾನ ಹುಯಿಲಗೋಳ, ರಾ.ದೇ. ಕಾರಭಾರಿ, ರಾಘವೇಂದ್ರ ಹಬೀಬ, ಶಿವಾನಂದ ತಮ್ಮಣ್ಣವರ, ನಗರಸಭೆ ಮಾಜಿ ಉಪಾಧ್ಯಕ್ಷ ಪ್ರಕಾಶ ಬಾಕಳೆ ಸೇರಿ ಅನೇಕರು ಭಾಗವಹಿಸಿದ್ದರು.

### ಆರ್ಥಿಕತೆಗನುಗುಣವಾಗಿ ಆಯ-ವ್ಯಯ

ಅವಳಿ ನಗರದಲ್ಲಿ ನಗರಸಭೆ ಮಾಲೀಕತ್ವದ ಮಳಿಗೆಗಳ ಬಾಡಿಗೆ ವಸೂಲಿಗೆ ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ನಗರಸಭೆಯಲ್ಲಿ ಲಭ್ಯವಿರುವ ಆರ್ಥಿಕತೆಗೆ ಅನುಗುಣವಾಗಿ ಯೋಜನೆ ರೂಪಿಸಲಾಗುವುದು. ಅಗತ್ಯ ಮೂಲಸೌಕರ್ಯ, ಕುಡಿಯುವ ನೀರು, ಬೀದಿದೀಪಗಳ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

**- ಉಷಾ ಮಹೇಶ ದಾಸರ.**
ನಗರಸಭೆ ಅಧ್ಯಕ್ಷೆ.



# ಕಷ್ಟಕಾಲದಲ್ಲಿ ಕಾಯುವವನೇ ದೊಡ್ಡವನು!

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ



ಹುಬ್ಬಳ್ಳಿಯಿಂದ ದೆಹಲಿಗೆ ಹೋಗುತ್ತಿರುವ ಇಂಡಿಗೋ ವಿಮಾನ ಫೆ.4ರಂದು ಎಂದಿನಂತೆ ಎಲ್ಲ ಪ್ರಯಾಣಿಕರನ್ನು ಹೊತ್ತು ಪ್ರಯಾಣ ಬೆಳೆಸಿತ್ತು. ಅದರಲ್ಲಿ ಓರ್ವ ಪ್ರಯಾಣಿಕರು ಉಸಿರಾಟದ ತೊಂದರೆಯಿಂದ ಸಂಕಟ ಪಡತೊಡಗಿದ್ದರು. ಕಾಯುವವನು ದೊಡ್ಡವನು ಎಂಬಂತೆ, ಅದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಡಾ. ಮಹೇಶ ನಾಲವಡ ಅವರು ಸಮಯ ಪ್ರಜ್ಞೆ ಹಾಗೂ ನೀಡಿದ ತುರ್ತು ಚಿಕಿತ್ಸೆಯಿಂದ ಆ ಪ್ರಯಾಣಿಕನ ಪಾಲಿಗೆ ದೇವರು ಕಳುಹಿದ ರಕ್ಷಕರಾದರು.

ಕಷ್ಟ ಸಮಯದಲ್ಲಿ ಸಿಗುವ ಒಂದು ಹನಿ ನೀರು ಸಹ ಅಮೃತವಾಗುತ್ತದೆ ಎಂಬುದು ನಿಜ. ಸಾಮಾಜಿಕ ಕಳಕಳಿಯ ಡಾ. ಮಹೇಶ ನಾಲವಾಡ ನೂರಾರು ಉಚಿತ ಆರೋಗ್ಯ ಶಿಬಿರಗಳಿಂದ ಲಕ್ಷಾಂತರ ಜನರ ಪಾಲಿಗೆ ರಕ್ಷಕರಾಗಿದ್ದಾರೆ. ಇಂಡಿಗೋ ವಿಮಾನ ಸಿಬ್ಬಂದಿ ಹಾಗೂ ವಿಮಾನದಲ್ಲಿದ್ದ ಪ್ರಯಾಣಿಕರು ಡಾ. ಮಹೇಶ ನಾಲವಾಡರಿಗೆ ಕೃತಜ್ಞತೆ ಅರ್ಪಿಸಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

# ಮಾಧ್ಯಮ ಮಿತ್ರರಿಗೂ ಅನುದಾನ ಮೀಸಲಿಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪತ್ರಕರ್ತರಿಗೆ ನಗರಸಭೆಯ 2024ರ ಬಜೆಟ್ಟಿನಲ್ಲಿ ಹಣಕಾಸಿನ ಸೌಲಭ್ಯ ನೀಡಲು ಜಿಲ್ಲಾ ಆಟೋ ಚಾಲಕ-ಮಾಲಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಕಿತ್ತೂರು ಕರ್ನಾಟಕ ಪಂಚಮಸಾಲಿ ಪಂಚೆ ಸೇನೆಯ ಉಸ್ತುವಾರಿ ಬಸವರಾಜ್ ಮನಗುಂಡಿ ಆಗ್ರಹಿಸಿದ್ದಾರೆ.



ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಪತ್ರಕರ್ತರು ಹಾಗೂ ಮಾಧ್ಯಮ ವರ್ಗದವರಿಗೂ ಆರ್ಥಿಕವಾಗಿ ನೆರವಾಗುವಂತೆ ಹಣ ಮೀಸಲಿಡಬೇಕು. ಪ್ರಾಮಾಣಿಕವಾಗಿ, ಗೌರವಯುತವಾಗಿ ಕಾರ್ಯ ನಿರ್ವಹಿಸುತ್ತಿರುವ ಮಾಧ್ಯಮ ಮಿತ್ರರು ಹೆಚ್ಚಾಗಿ 10ರಿಂದ 15 ಸಾವಿರ ರೂ. ಸಂಬಳದೊಂದಿಗೆ ದುಡಿಯುತ್ತಿದ್ದಾರೆ. ಇಂದಿನ ಈ ದುಬಾರಿ ಜೀವನದಲ್ಲಿ ಜೀವನ ನಡೆಸುವುದು ಕಷ್ಟಕರವಾಗುತ್ತಿದೆ.

ಸಮಾಜದಲ್ಲಿ ನಡೆಯುವ ವಿದ್ಯಮಾನಗಳನ್ನು ಇಡೀ ಜಗತ್ತಿಗೆ ತಿಳಿಸುವ ಮಹತ್ಕಾರ್ಯ ಮಾಡುವ ಪತ್ರಕರ್ತರು ಜೀವದ ಹಂಗು ತೊರೆದು ಕೆಲಸ ನಿರ್ವಹಿಸುತ್ತಿದ್ದಾರೆ. ಅವರ ಜೀವನಕ್ಕೆ ಭದ್ರತೆ ನೀಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ರಾಜ್ಯ ಬಜೆಟ್‌ನಲ್ಲಿ ಪತ್ರಕರ್ತರಿಗೆ ಅನುದಾನ ಮೀಸಲಿಡುವ ಹಾಗೆ ನಗರಸಭೆಯ ಬಜೆಟ್‌ನಲ್ಲೂ ಪತ್ರಕರ್ತರ ಕುಟುಂಬದ ಭದ್ರತೆಗಾಗಿ ಒಂದಿಷ್ಟು ಅನುದಾನವನ್ನು ಮೀಸಲಿಡುವುದು ಅಗತ್ಯವಾಗಿದೆ ಎಂದು ಅವರು ಮನವಿ ಮಾಡಿದ್ದಾರೆ.

## ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಾರ್ಗದರ್ಶನ, ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ

# ಕೀಳರಿಮೆ ತೊರೆದು ಸಾಧನೆ ಮಾಡಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪ್ರಾಥಮಿಕ ಹಾಗೂ ಪ್ರೌಢ ಹಂತದಲ್ಲಿ ಮಕ್ಕಳು ತಮ್ಮಲ್ಲಿರುವ ಕೀಳರಿಮೆಯನ್ನು ತೊರೆದು ಗುರಿ ಸಾಧನೆಯತ್ತ ಹೆಜ್ಜೆ ಹಾಕಬೇಕು. ಮಕ್ಕಳಲ್ಲಿ ಆತ್ಮ ವಿಶ್ವಾಸ, ಕಠಿಣ ಶ್ರಮ, ಛಲ, ವಿವಿಧ ತರಹದ ಆಲೋಚನೆ, ವಿಚಾರ ಶಕ್ತಿ, ಬೆಳೆಸಿಕೊಂಡು ಸತತ ಪ್ರಯತ್ನಪಟ್ಟಲ್ಲಿ ಫಲ ಕಟ್ಟಿಟ್ಟ ಬುತ್ತಿ ಎಂದು ವಿಜ್ಞಾನಿ ಸುಧೀಂದ್ರ ಬಿಂದಗಿ ಹೇಳಿದರು.

ಅವರು ಪಟ್ಟಣ ಸಮೀಪದ ಹರ್ತಿ ಗ್ರಾಮದ ಬಸವೇಶ್ವರ ಕಲಾ ಭವನದಲ್ಲಿ ಹರ್ತಿ ಗ್ರಾಮ ಪಂಚಾಯಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಗದಗ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಗದಗ ಗ್ರಾಮೀಣ ವಲಯ, ಸಮೂಹ ಸಂಪನ್ಮೂಲ ಕೇಂದ್ರ ಹರ್ತಿ ಇವರ ಸಂಯುಕ್ತ ಆಶ್ರಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಾರ್ಗದರ್ಶನ ಹಾಗೂ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಂತರ ಛಾಯಾಚಿತ್ರಗಳ ಮೂಲಕ ಚಂದ್ರಯಾನ ಉಡಾವಣೆ, ಲ್ಯಾಡಿಂಗ್, ಸಂಭ್ರಮಾಚರಣೆ, ಚಂದ್ರಯಾನದಿಂದ ನಮಗೆ ಆಗುವ ಲಾಭಗಳು ಇತ್ಯಾದಿ ವಿಷಯಗಳನ್ನು ವಿವರಿಸಿ, ಮಕ್ಕಳ ಪ್ರಶ್ನೆಗಳಿಗೆ ಸೌಜನ್ಯದಿಂದ ಉತ್ತರ ನೀಡಿ ಸಂವಾದ ನೆಡೆಸಿದರು.

ಹರ್ತಿ ಗ್ರಾ.ಪಂ ಅಧ್ಯಕ್ಷರಾದ ದೇವಕ್ಕಾ ಅಸುಂಡಿ ಅಧ್ಯಕ್ಷತೆ ವಹಿಸಿದ್ದರು. ಪಿಡಿಓ ಶಿವಲೀಲಾ ಅಂಗಡಿ, ಶುಭ ಎಸ್.ಬಿಂದಗಿ, ಬಿ.ಟಿ. ಸೋಮರೆಡ್ಡಿ, ಸೋಮರೆಡ್ಡಿ ನಡವೂರ, ಪ್ರಭು ಹುಡೆದ, ಬಿ.ಬಿ. ಹೊನ್ನಪ್ಪನವರ, ಟಿ.ಬಿ. ಸೊಮರೆಡ್ಡಿ, ಸಿಆರ್‌ಪಿ ಇಮಾಮಸಾಬ ಗಾಡಗೋಳಿ, ಎಲ್ಲಪ್ಪ ಕೋರಿ, ವಿ.ಎಂ. ಹಿರೇಮಠ, ಎಸ್.ಆರ್. ಬಂಡಿ. ಕೆ.ಬಿ. ಕೊನ್ನೂರ, ವಿ.ಎಫ್. ಕಲಕಂಬಿ, ಗೀತಾ ಸಿಂದಗಿ, ಎ.ಬಿ. ರೆಡ್ಡರ, ಹರ್ತಿ ಕ್ಲಸ್ಟರ್ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿದ್ದರು.

ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ. ನಡುವಿನಮನಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಕ್ಕಳ ಕಲಿಕೆಯ ಗುಣಮಟ್ಟ ಹೆಚ್ಚಿಸುತ್ತದೆ. ಮಕ್ಕಳು ನಿತ್ಯ ಬೆಳಿಗ್ಗೆ 4 ಗಂಟೆಗೆ ಎದ್ದು ಅಭ್ಯಾಸ ಮಾಡಬೇಕು. ವಿಷಯವಾರು ಶಿಕ್ಷಕರೊಂದಿಗೆ ಕಠಿಣವಾದ ಪ್ರಶ್ನೆಗಳನ್ನು ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ಪರೀಕ್ಷೆಯ ಬಗ್ಗೆ ಭಯ ಪಡಬಾರದು ಎಂದರು.

ಕರ್ನಾಟಕ ಸರ್ಕಾರ

## ಪಟ್ಟಣ ಪಂಚಾಯತ ಕಾರ್ಯಾಲಯ, ಮುಳಗುಂದ ಜಿಲ್ಲಾ : ಗದಗ

ದೂರವಾಣಿ : 08372-280128 ಈ-ಮೇಲ್ ka.mulagunda.tp@gmail.com, Website : http://www.mulgundtown.mrc.gov.in

ಕ್ರ.ಸಂ/ಪ.ಪಂ.ಮು/ಕಂದಾಯ.ವಿಭಾಗ/10ನೇ.ಹ.ವಾ.ಮ.ಬ.ಹ.ಕು/ವಹಿ- /2023-24 ದಿನಾಂಕ : 05/02/2024

### ಮಳಿಗೆಗಳ ಬಹಿರಂಗ ಹರಾಜು ಪ್ರಕಟಣೆ ಕರೆ-3

ಈ ಮೂಲಕ ಯಾವತ್ತು ವ್ಯಾಪಾರಸ್ಥರು ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸುವದೇನೆಂದರೆ, ಪಟ್ಟಣ ಪಂಚಾಯತ ಮುಳಗುಂದ ವ್ಯಾಪ್ತಿಯಲ್ಲಿ ಬರುವ ವಿವಿಧ ಅನುದಾನದಲ್ಲಿ ನಿರ್ಮಿಸಿದ ಒಟ್ಟು 24 ಮಳಿಗೆಗಳ ಬಹಿರಂಗ ಲೀಲಾವು ಮೂಲಕ ನಡೆಸಲು ಸರ್ಕಾರದ ಮಾರ್ಗಸೂಚಿಯಂತೆ **ಮಾನ್ಯ ಜಿಲ್ಲಾಧಿಕಾರಿಗಳ ಗದಗ ಇವರು ಬಹಿರಂಗ ಲೀಲಾವು ಮಾಡಲು ಮಂಜೂರ ನೀಡಿದ ಆದೇಶ ಪತ್ರ:ಜಿನಕೋ/ಅಭಿವೃದ್ಧಿ/ಪ.ಪಂ.ಮು/10ನೇ ಹ ಮಳಿಗೆ ಹರಾಜು/ವಹಿ- /2022-23 ದಿನಾಂಕ : 20-09-2022**ರಂತೆ **12 ವರ್ಷಗಳ ಅವಧಿಗೆ** ಮಾಸಿಕ ಬಾಡಿಗೆಯನ್ನು ನಿಗದಿಪಡಿಸಿದಂತೆ ದಿನಾಂಕ : 19-10-2022 ರಂದು ನಡೆದ 1ನೇ ಬಹಿರಂಗ ಹರಾಜಿನಲ್ಲಿ ಯಾರು ಭಾಗವಹಿಸದೇ ಇರುವ ಹಿನ್ನಲೆಯಲ್ಲಿ ಹಾಗೂ **ಮಾನ್ಯ ಜಿಲ್ಲಾಧಿಕಾರಿಗಳ ಗದಗ ಇವರು ಬಹಿರಂಗ ಲೀಲಾವು ಮಾಡಲು ಮಂಜೂರ ನೀಡಿದ ಆದೇಶ ಪತ್ರ:ಜಿನಕೋ/ಅಭಿವೃದ್ಧಿ/ಪ.ಪಂ.ಮು/10ನೇ ಹ ಮಳಿಗೆ ಹರಾಜು/ವಹಿ- /2022-23 ದಿನಾಂಕ : 02-12-2023** ರಂತೆ **12 ವರ್ಷಗಳ ಅವಧಿಗೆ** ಮಾಸಿಕ ಬಾಡಿಗೆಯನ್ನು ನಿಗದಿಪಡಿಸಿದಂತೆ ದಿನಾಂಕ : 22-12-2023 ರಂದು ನಡೆದ 1ನೇ ಬಹಿರಂಗ ಹರಾಜಿನಲ್ಲಿ ಅರ್ಜಿದಾರರು ಇ.ಎಮ್.ಡಿ ಹಣ ಭರಣಾ ಮಾಡಲು ನಿರಾಕರಿಸಿ ಹಾಗೂ ಭಾಗವಹಿಸದೆ ಇರುವ ಹಿನ್ನಲೆಯಲ್ಲಿ ಬಹಿರಂಗ ಹರಾಜು ಪ್ರಕಟಣೆ ಕರೆ-2 ಅನ್ನು ದಿನಾಂಕ : **08/01/2024** ರಂದು ಸೋಮುವಾರ ಮುಂಜಾನೆ 11:00 ಘಂಟೆಗೆ ಪಟ್ಟಣ ಪಂಚಾಯತ ಕಾರ್ಯಾಲಯದ ಮುಂಭಾಗದಲ್ಲಿ ನಡೆದ ಬಹಿರಂಗ ಹರಾಜಿನಲ್ಲಿ ಯಾರು ಭಾಗವಹಿಸದೇ ಇರುವ ಹಿನ್ನಲೆಯಲ್ಲಿ ಪುನ: ಬಹಿರಂಗ ಲೀಲಾವು ಕರೆ-1 ಮತ್ತು ಕರೆ-2ರಲ್ಲಿ ನಿಗದಿಪಡಿಸಿದ ಮಾಸಿಕ ಬಾಡಿಗೆ ಮೊತ್ತದಲ್ಲಿ ಸುತ್ತೋಲೆಯಂತೆ ಶೇ.25% ರಷ್ಟು ಕಡಿಮೆ ಮಾಡಿ ದಿನಾಂಕ : **20/02/2024** ರಂದು ಮಂಗಳವಾರ ಮುಂಜಾನೆ 11:00 ಘಂಟೆಗೆ ಬಹಿರಂಗ ಲೀಲಾವು ಕರೆ-3 ಅನ್ನು ಪಟ್ಟಣ ಪಂಚಾಯತಿ ಕಾರ್ಯಾಲಯದ ಮುಂಭಾಗದಲ್ಲಿ ನಡೆಸಲು ಈ ಕೆಳಗಿನ ನಿರ್ದೇಶನ ಪಾಲಿಸಲು ಕೋರಿದೆ.

(1) ನಿಗಧಿತ ಅರ್ಜಿಯನ್ನು ಪಡೆಯುವದು ಸಾರ್ವಜನಿಕರ ಪ್ರಕಟಣೆ ಪ್ರಚುರಪಡಿಸಿದ ದಿನಾಂಕದಿಂದ ದಿನಾಂಕ : **05/02/2024**ರ ವರೆಗೆ ದಿನಾಂಕ : **05/02/2024** ದಿಂದ ದಿನಾಂಕ : **15/02/2024** ರ ಸಂಜೆ 05:30 ಘಂಟೆಯವರೆಗೆ ಮಾತ್ರ ಅರ್ಜಿ ಕೊಡುವುದು. (2) ಅರ್ಜಿ ಶುಲ್ಕ : ಸಾಮಾನ್ಯ ಅರ್ಜಿ ಶುಲ್ಕ ರೂ. **100/-** ವಿಕಲಚೇತನರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಅರ್ಜಿ ಶುಲ್ಕ ರೂ. **50/-** (3) ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **16/02/2024** ರ ಸಂಜೆ 05:30 ಘಂಟೆಯವರೆಗೆ (4) ಬಹಿರಂಗ ಹರಾಜು ಮಾಡುವ ದಿನಾಂಕ : **20/02/2024** ರ ಬೆಳಿಗ್ಗೆ 11:00 ಘಂಟೆಗೆ. (5) ಬಹಿರಂಗ ಹರಾಜು ಮಾಡುವ ಸ್ಥಳ ಸಮಯ ದಿನಾಂಕ : ಪಟ್ಟಣ ಪಂಚಾಯತಿ ಕಾರ್ಯಾಲಯದ ಮುಂಭಾಗದಲ್ಲಿ ದಿನಾಂಕ : **20/02/2024** ರಂದು ಮಂಗಳವಾರ ಬೆಳಿಗ್ಗೆ 11:00 ಘಂಟೆಗೆ.

**10ನೇ ಹಣಕಾಸು ಯೋಜನೆಯಡಿ ನಿರ್ಮಿಸಿದ ವಾಣಿಜ್ಯ ಮಳಿಗೆ ನಂ.01 ರಿಂದ 13ರ ಮಳಿಗೆಗಳ ಬಹಿರಂಗ ಹರಾಜು ಕರೆ-3.**

| ಅ ನಂ | ಮಳಿಗೆ ನಂ | ಮಳಿಗೆ ಅಳತೆ (ಚ.ಅಡಿ) | ಮೀಸಲಾತಿ ವಿವರ | ಬಹಿರಂಗ ಲೀಲಾವು ಕರೆ-1 & ಕರೆ-2ರಲ್ಲಿ ನಿಗಧಿಪಡಿಸಿದ ಮಾಸಿಕ ರಕಂ | ಸುತ್ತೋಲೆಯಂತೆ ಈಗ ಶೇ.25% ಕಡಿಮೆ ಮಾಡಿ ನಿಗಧಿಪಡಿಸಿದ ಮಾಸಿಕ ಬಾಡಿಗೆ ರಕಂ | ಲೀಲಾವಿನಲ್ಲಿ ಭಾಗವಹಿಸುವವರು ತುಂಬಬೇಕಾದ ಇ.ಎಂ.ಡಿ ಹಣ | ಯಶಸ್ವಿ ಬಿಡ್ಡದಾರರ ಪಾವತಿಸುವ ಠೇವಣಿ ರಕಂ | ಷರಾ |
|---|---|---|---|---|---|---|---|---|
| 1 | 1 | 264 | ಸಾಮಾನ್ಯ | 10617.00 | 7962.75 | 10000.00 | 53623.00 | ಬಹಿರಂಗ ಹರಾಜು |
| 2 | 2 | 252 | ಸಾಮಾನ್ಯ | 10638.00 | 7978.50 | 10000.00 | 51185.00 | ಬಹಿರಂಗ ಹರಾಜು |
| 3 | 3 | 228 | ಸಾಮಾನ್ಯ | 10681.00 | 8010.75 | 10000.00 | 46310.00 | ಬಹಿರಂಗ ಹರಾಜು |
| 4 | 4 | 199.5 | ಸಾಮಾನ್ಯ | 10732.00 | 8049.00 | 10000.00 | 40521.00 | ಬಹಿರಂಗ ಹರಾಜು |
| 5 | 5 | 190 | ಪರಿಶಿಷ್ಟ ಜಾತಿ | 10802.00 | 8101.50 | 10000.00 | 38592.00 | ಬಹಿರಂಗ ಹರಾಜು |
| 6 | 6 | 190 | ಪರಿಶಿಷ್ಟ ಜಾತಿ | 10802.00 | 8101.50 | 10000.00 | 38592.00 | ಬಹಿರಂಗ ಹರಾಜು |
| 7 | 7 | 190 | ಪರಿಶಿಷ್ಟ ಜಾತಿ | 10802.00 | 8101.50 | 10000.00 | 38592.00 | ಬಹಿರಂಗ ಹರಾಜು |
| 8 | 8 | 190 | ಪರಿಶಿಷ್ಟ ಪಂಗಡ | 10802.00 | 8101.50 | 10000.00 | 38592.00 | ಬಹಿರಂಗ ಹರಾಜು |
| 9 | 9 | 164 | ಸಾಮಾನ್ಯ | 10795.00 | 8096.25 | 10000.00 | 33311.00 | ಬಹಿರಂಗ ಹರಾಜು |
| 10 | 10 | 160 | ಸಾಮಾನ್ಯ | 10802.00 | 8101.50 | 10000.00 | 32498.00 | ಬಹಿರಂಗ ಹರಾಜು |
| 11 | 11 | 164 | ಸಾಮಾನ್ಯ | 10795.00 | 8096.25 | 10000.00 | 33311.00 | ಬಹಿರಂಗ ಹರಾಜು |
| 12 | 12 | 168 | ಸಾಮಾನ್ಯ | 10788.00 | 8091.00 | 10000.00 | 34123.00 | ಬಹಿರಂಗ ಹರಾಜು |
| 13 | 13 | 161.5 | ಸಾಮಾನ್ಯ | 10800.00 | 8100.00 | 10000.00 | 32803.00 | ಬಹಿರಂಗ ಹರಾಜು |

**ಐ.ಡಿ.ಎಸ್.ಎಮ್.ಟಿ ಯೋಜನೆಯಡಿ ನಿರ್ಮಿಸಿದ ವಾಣಿಜ್ಯ ಮಳಿಗೆ ನಂ.01 ರಿಂದ 06ರ ಮಳಿಗೆಗಳ ಬಹಿರಂಗ ಹರಾಜು ಕರೆ-3.**

| ಅ ನಂ | ಮಳಿಗೆ ನಂ | ಮಳಿಗೆ ಅಳತೆ (ಚ.ಅಡಿ) | ಮೀಸಲಾತಿ ವಿವರ | ಬಹಿರಂಗ ಲೀಲಾವು ಕರೆ-1 & ಕರೆ-2ರಲ್ಲಿ ನಿಗಧಿಪಡಿಸಿದ ಮಾಸಿಕ ರಕಂ | ಸುತ್ತೋಲೆಯಂತೆ ಈಗ ಶೇ.25% ಕಡಿಮೆ ಮಾಡಿ ನಿಗಧಿಪಡಿಸಿದ ಮಾಸಿಕ ಬಾಡಿಗೆ ರಕಂ | ಲೀಲಾವಿನಲ್ಲಿ ಭಾಗವಹಿಸುವವರು ತುಂಬಬೇಕಾದ ಇ.ಎಂ.ಡಿ ಹಣ | ಯಶಸ್ವಿ ಬಿಡ್ಡದಾರರ ಪಾವತಿಸುವ ಠೇವಣಿ ರಕಂ | ಷರಾ |
|---|---|---|---|---|---|---|---|---|
| 1 | 1 | 147 | ಸಾಮಾನ್ಯ | 4324.00 | 3243.00 | 10000.00 | 37589.00 | ಬಹಿರಂಗ ಹರಾಜು |
| 2 | 2 | 147 | ಸಾಮಾನ್ಯ | 4324.00 | 3243.00 | 10000.00 | 37589.00 | ಬಹಿರಂಗ ಹರಾಜು |
| 3 | 3 | 147 | ಸಾಮಾನ್ಯ | 4324.00 | 3243.00 | 10000.00 | 37589.00 | ಬಹಿರಂಗ ಹರಾಜು |
| 4 | 4 | 147 | ಸಾಮಾನ್ಯ | 4324.00 | 3243.00 | 10000.00 | 37589.00 | ಬಹಿರಂಗ ಹರಾಜು |
| 5 | 5 | 147 | ಸಾಮಾನ್ಯ | 4324.00 | 3243.00 | 10000.00 | 37589.00 | ಬಹಿರಂಗ ಹರಾಜು |
| 6 | 6 | 147 | ವಿಕಲಚೇತನ | 4324.00 | 3243.00 | 10000.00 | 37589.00 | ನೇರವಾಗಿ ಲಾಟರಿ ಮೂಲಕ |

**11ನೇ ಹಣಕಾಸು ಯೋಜನೆಯಡಿ ನಿರ್ಮಿಸಿದ ವಾಣಿಜ್ಯ ಮಳಿಗೆ ನಂ.01 ರಿಂದ 02ರ ಮಳಿಗೆಗಳ ಬಹಿರಂಗ ಹರಾಜು ಕರೆ-3**

| ಅ ನಂ | ಮಳಿಗೆ ನಂ | ಮಳಿಗೆ ಅಳತೆ (ಚ.ಅಡಿ) | ಮೀಸಲಾತಿ ವಿವರ | ಬಹಿರಂಗ ಲೀಲಾವು ಕರೆ-1 & ಕರೆ-2ರಲ್ಲಿ ನಿಗಧಿಪಡಿಸಿದ ಮಾಸಿಕ ರಕಂ | ಸುತ್ತೋಲೆಯಂತೆ ಈಗ ಶೇ.25% ಕಡಿಮೆ ಮಾಡಿ ನಿಗಧಿಪಡಿಸಿದ ಮಾಸಿಕ ಬಾಡಿಗೆ ರಕಂ | ಲೀಲಾವಿನಲ್ಲಿ ಭಾಗವಹಿಸುವವರು ತುಂಬಬೇಕಾದ ಇ.ಎಂ.ಡಿ ಹಣ | ಯಶಸ್ವಿ ಬಿಡ್ಡದಾರರ ಪಾವತಿಸುವ ಠೇವಣಿ ರಕಂ | ಷರಾ |
|---|---|---|---|---|---|---|---|---|
| 1 | 1 | 141.75 | ಸಾಮಾನ್ಯ | 1269.00 | 951.75 | 10000.00 | 27685.00 | ಬಹಿರಂಗ ಹರಾಜು |
| 2 | 2 | 141.75 | ಸಾಮಾನ್ಯ | 1269.00 | 951.75 | 10000.00 | 27685.00 | ಬಹಿರಂಗ ಹರಾಜು |

**10ನೇ ಹಣಕಾಸು ಯೋಜನೆಯಡಿ ವಾರ್ಡ ನಂ.5 ಬಜಾರದಲ್ಲಿ ನಿರ್ಮಿಸಿದ ವಾಣಿಜ್ಯ ಮಳಿಗೆ ನಂ.06, 07 ಮತ್ತು 08ರ ಮಳಿಗೆಗಳ ಬಹಿರಂಗ ಹರಾಜು ಕರೆ-3**

| ಅ ನಂ | ಮಳಿಗೆ ನಂ | ಮಳಿಗೆ ಅಳತೆ (ಚ.ಅಡಿ) | ಮೀಸಲಾತಿ ವಿವರ | ಬಹಿರಂಗ ಲೀಲಾವು ಕರೆ-1 & ಕರೆ-2ರಲ್ಲಿ ನಿಗಧಿಪಡಿಸಿದ ಮಾಸಿಕ ರಕಂ | ಸುತ್ತೋಲೆಯಂತೆ ಈಗ ಶೇ.25% ಕಡಿಮೆ ಮಾಡಿ ನಿಗಧಿಪಡಿಸಿದ ಮಾಸಿಕ ಬಾಡಿಗೆ ರಕಂ | ಲೀಲಾವಿನಲ್ಲಿ ಭಾಗವಹಿಸುವವರು ತುಂಬಬೇಕಾದ ಇ.ಎಂ.ಡಿ ಹಣ | ಯಶಸ್ವಿ ಬಿಡ್ಡದಾರರ ಪಾವತಿಸುವ ಠೇವಣಿ ರಕಂ | ಷರಾ |
|---|---|---|---|---|---|---|---|---|
| 1 | 6 | 70 | ಪರಿಶಿಷ್ಟ ಪಂಗಡ | 2019.00 | 1514.25 | 5000.00 | 25000.00 | ಬಹಿರಂಗ ಹರಾಜು |
| 2 | 7 | 120 | ಸಾಮಾನ್ಯ | 2844.00 | 2133.00 | 5000.00 | 75000.00 | ಬಹಿರಂಗ ಹರಾಜು |
| 3 | 8 | 160 | ಸಾಮಾನ್ಯ | 3606.00 | 2704.50 | 5000.00 | 75000.00 | ಬಹಿರಂಗ ಹರಾಜು |

**ವಿಶೇಷ ಸೂಚನೆ :** ಹರಾಜಿನ ಷರತ್ತು ಹಾಗೂ ನಿಂಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಅವಧಿಯಲ್ಲಿ ಕಂದಾಯ ವಿಭಾಗಕ್ಕೆ ಸಂಪರ್ಕಿಸಿ ಪಡೆಯಬಹುದಾಗಿದೆ.

**ಸಹಿ/- (ಮಂಜುನಾಥ ಪಿ ಗುಳೇದ)**
**ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಮುಳಗುಂದ**

**ಸಹಿ/- (ಶ್ರೀನಿವಾಸಮೂರ್ತಿ ಕುಲಕರ್ಣಿ)**
**ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ ಮುಳಗುಂದ ಹಾಗೂ ತಹಶೀಲ್ದಾರ ತಾಲೂಕಾ, ಕಾರ್ಯನಿರ್ವಾಹಕ ದಂಡಾಧಿಕಾರಿಗಳು, ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/511/2023-24

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka